# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಫೆಬ್ರವರಿ 06, 2021

ಸಂಪುಟ : 47 ಸಂಚಿಕೆ : 278 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


# ಪಂಚಮಸಾಲಿ 2ಎ ಮೀಸಲಾತಿ : ವರದಿಗೆ ಸಿಎಂ ಸೂಚನೆ

ಬೆಂಗಳೂರು, ಫೆ. 5 - ಪಂಚಮಸಾಲಿ ಸಮುದಾಯವನ್ನು ಹಿಂದುಳಿದ ವರ್ಗ 2ಎ ಮೀಸಲಾತಿಗೆ ಒಳಪಡಿಸುವುದಕ್ಕೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೂಚಿಸಿದ್ದಾರೆ.

**ಯಡಿಯೂರಪ್ಪಗೆ ವಯೋಸಹಜ ಕಾಯಿಲೆ, ಬುದ್ಧಿಭ್ರಮಣೆ ಎಂದು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ತರಾಟೆಗೆ ತೆಗೆದುಕೊಂಡ ನಂತರ ನಿಲುವು ಬದಲಿಸಿದ ಮುಖ್ಯಮಂತ್ರಿ**

ತಮ್ಮ ಸಮಾಜವು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಔದ್ಯೋಗಿಕವಾಗಿ ಹಿಂದುಳಿದಿದೆ ಮತ್ತು ಸಮಾಜದ ಕಡು ಬಡವರಿಗೆ ತೊಂದರೆ ಯಾಗಿದೆ. ತಮ್ಮ ಸಮಾಜವನ್ನು ಹಿಂದುಳಿದ ವರ್ಗ 2ಎ ಮೀಸಲಾತಿಗೆ ಒಳಪಡಿಸಲು ಮನವಿ ಮಾಡಿದ್ದಾರೆ. ಈ ಕಾರಣ ಸಮಗ್ರ ಅಧ್ಯಯನ ಮಾಡುವಂತೆ ಆಯೋಗಕ್ಕೆ ಯಡಿಯೂರಪ್ಪ ಪತ್ರ ಬರೆದಿದ್ದಾರೆ.

ಶುಕ್ರವಾರ ನಡೆದ ವಿಧಾನಸಭಾ ಅಧಿವೇಶನದಲ್ಲಿ ಹೇಳಿಕೆ ನೀಡಿದ್ದ ಯಡಿಯೂರಪ್ಪ, ನಮ್ಮದು ರಾಷ್ಟ್ರೀಯ ಪಕ್ಷ. ಪ್ರಾದೇಶಿಕ ಪಕ್ಷವಲ್ಲ. ಇಲ್ಲಿ ನಾನೇ ಕುಳಿತು ಸ್ವಯಂ ಆಗಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ. (2ನೇ ಪುಟಕ್ಕೆ)



## ವೈಮನಸ್ಸು ಮರೆತು ಒಂದಾದ ಗುರು - ಶಿಷ್ಯರು !

ಮೀಸಲಾತಿಗೆ ಒತ್ತಾಯಿಸಿ ಪಂಚಮಸಾಲಿ ಪೀಠದ ಉಭಯ ಜಗದ್ಗುರುಗಳು ನಡೆಸುತ್ತಿರುವ ಪಾದಯಾತ್ರೆಯು ಶುಕ್ರವಾರ ರಾತ್ರಿ ಹಿರಿಯೂರು ತಲುಪಿದ್ದು, ಏತನ್ಮಧ್ಯೆ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮೀಸಲಾತಿ ಕುರಿತಂತೆ ವಿಧಾನಸಭೆಯಲ್ಲಿ ನೀಡಿದ ಹೇಳಿಕೆ ಬಗ್ಗೆ ಉಭಯ ಜಗದ್ಗುರುಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಹಿರಿಯೂರು (2ನೇ ಪುಟಕ್ಕೆ)

## ಪಂಚಮಸಾಲಿ, ಕುರುಬ ಮೀಸಲಾತಿ ನನ್ನಿಂದ ಸಾಧ್ಯವಿಲ್ಲ



**ದೆಹಲಿಗೆ ನಿಯೋಗ ಕೊಂಡೊಯ್ಯಿರಿ ಎಂದು ಯತ್ನಾಳ್‌ಗೆ ಹೇಳಿದ ಸಿಎಂ**

ಬೆಂಗಳೂರು, ಫೆ.5- ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎ ಗೆ, ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಷಯ ನನ್ನಿಂದ ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲಿ ಕೈಚೆಲ್ಲಿದ್ದಾರೆ.


ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಸಂದರ್ಭದಲ್ಲಿ ಆಡಳಿತ ಪಕ್ಷದ ಬಸನಗೌಡ ಪಾಟೀಲ್ ಯತ್ನಾಳ್ ಮಾತನಾಡಿ, ಪಂಚಮಸಾಲಿ ಸಮುದಾಯ ತಮ್ಮ ಹಕ್ಕಿಗಾಗಿ ಬೀದಿಗೆ ಇಳಿದಿದೆ, ಈ ಬಗ್ಗೆ ಚರ್ಚೆಯಾಗಬೇಕು ಎಂದು ಪಟ್ಟು ಹಿಡಿದರು.

ಯತ್ನಾಳ್ ಮಾತು ಮುಖ್ಯಮಂತ್ರಿ ಅವರಿಗೆ (2ನೇ ಪುಟಕ್ಕೆ)

## ರಿಸರ್ವ್ ಬ್ಯಾಂಕ್ ಬಡ್ಡಿ ದರ ಯಥಾಸ್ಥಿತಿ

ಮುಂಬೈ, ಫೆ. 5 - ರಿಸರ್ವ್ ಬ್ಯಾಂಕ್ ತನ್ನ ಪ್ರಮುಖ ಬಡ್ಡಿ ದರಗಳನ್ನು ಸತತ ನಾಲ್ಕನೇ ಬಾರಿ ಯಥಾಸ್ಥಿತಿಯಲ್ಲಿರಿಸಿದೆ. ಆರ್.ಬಿ.ಐ.ನ ಆರು ಸದಸ್ಯರ ಹಣಕಾಸು ನೀತಿ ಸಮಿತಿ ಈ ನಿರ್ಧಾರ ತೆಗೆದುಕೊಂಡಿದೆ.

ಕೊರೊನಾದಿಂದ ಪರಿಣಾಮ ಎದುರಿಸಿರುವ ಆರ್ಥಿಕತೆಗೆ ಉತ್ತೇಜನ ನೀಡುವ ಜೊತೆಗೆ, ಹಣದುಬ್ಬರವನ್ನು ನಿಯಂತ್ರಣದಲ್ಲಿಡುವ ಸಲುವಾಗಿ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿರಿಸಲಾಗಿದೆ ಎಂದು ಆರ್.ಬಿ.ಐ. ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. 2021ರ ಕೇಂದ್ರ ಬಜೆಟ್‌ನಲ್ಲಿ (2ನೇ ಪುಟಕ್ಕೆ)



## ಬಸವರಾಜ ಐರಣಿ ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ



ಬೆಂಗಳೂರು, ಫೆ. 5 - ನಟ, ನಾಟಕಕಾರ, ನಿರ್ದೇಶಕ ಎಸ್. ಎನ್.ಸೇತೂರಾಂ ಅವರು ಕರ್ನಾಟಕ ನಾಟಕ ಅಕಾಡೆಮಿಯ ಜೀವಮಾನದ ರಂಗ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇದೇ ವೇಳೆ ಅಕಾಡೆಮಿಯು 2020ನೇ ಸಾಲಿನ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ದಾವಣಗೆರೆಯ (2ನೇ ಪುಟಕ್ಕೆ)

## ದಾಖಲೆಗಳಿಲ್ಲದ 1.47 ಕೋಟಿ ವಶ

**ಸಂಚಾರಿ ಪೊಲೀಸರ ಭರ್ಜರಿ ಕಾರ್ಯಾಚರಣೆ**

ದಾವಣಗೆರೆ, ಫೆ.5- ಇಲ್ಲಿನ ಸಂಚಾರ ಪೊಲೀಸರು ದಾಖಲೆಗಳಿಲ್ಲದ ಭಾರೀ ಮೊತ್ತದ ಹಣದ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, 1.47 ಕೋಟಿ ರೂ. ನಗದು ವಶಪಡಿಸಿಕೊಂಡಿದ್ದು, ಮೂವರನ್ನು ಸೆರೆ ಹಿಡಿದಿದ್ದಾರೆ.

ಕಲಬುರಗಿ ವಾಸಿಗಳೆನ್ನಲಾದ ಶ್ರೀಕಾಂತ್, ಮಹೇಶ್ ಹಾಗೂ ಕಾರು ಚಾಲಕ ಬೀರಲಿಂಗ ಬಂಧಿತರು. ಬಂಧಿತರು ಅಕ್ರಮವಾಗಿ ಕಾರಿನಲ್ಲಿ ಕಲಬುರಗಿಯಿಂದ ದಾವಣಗೆರೆಗೆ ಭಾರೀ ಮೊತ್ತದ ಹಣವನ್ನು ಸಾಗಿಸುತ್ತಿದ್ದಾಗ ನಗರದ ಕೆ.ಆರ್. ರಸ್ತೆಯ ಶಾದಿ ಮಹಲ್ ಬಳಿ ಇಂದು ಸಂಜೆ ಪೊಲೀಸರ ಕೈಗೆ ಸಿಕ್ಕಿ ಬಿದ್ದಿದ್ದಾರೆ.

ಕರ್ತವ್ಯದಲ್ಲಿದ್ದ ಉತ್ತರ ಸಂಚಾರಿ ಪೊಲೀಸರು ವಾಹನ ತಪಾಸಣೆ ಮತ್ತು ಐಎಂವಿ ಪ್ರಕರಣ ದಾಖಲಿಸುವಾಗ ಅನುಮಾನಾಸ್ಪದವಾಗಿ ಕಂಡುಬಂದ ಈ ಕಾರನ್ನು ತಡೆದು ತಪಾಸಣೆ ಮಾಡಿದಾಗ ಕಾರಿನಲ್ಲಿ 3 ಬ್ಯಾಗ್ ಗಳಲ್ಲಿ ಹಣ ಪತ್ತೆಯಾಗಿದೆ. ಸಿಕ್ಕ ಎಲ್ಲ ಹಣವು 500 ರೂ. ನೋಟುಗಳಾಗಿವೆ.

ಹಣದ ಬಗ್ಗೆ ದಾಖಲೆ ಕೇಳಿದಾಗ ಬಂಧಿತರು ಸರಿಯಾದ ಮಾಹಿತಿ ನೀಡಿಲ್ಲ. ಆಜಾದ್ ನಗರ ಪೊಲೀಸ್ ಠಾಣೆಗೆ ಕರೆ ತಂದು ಹೆಚ್ಚಿನ ವಿಚಾರಣೆ ನಡೆಸಿದಾಗ ಭಾರೀ ಮೊತ್ತದ ಹಣಕ್ಕೆ ದಾಖಲೆ ಇಲ್ಲದಿರುವ ಮತ್ತು ಹಣ ಸಾಗಿಸುವ ಬಗ್ಗೆ ಬಂಧಿತರು ಬಾಯಿ ಬಿಟ್ಟಿದ್ದಾರೆ.

ಸರಿಯಾದ ದಾಖಲೆಗಳು ಇಲ್ಲದ ಕಾರಣ ಮುಂದಿನ ಕ್ರಮಕ್ಕಾಗಿ ತೆರಿಗೆ (5ನೇ ಪುಟಕ್ಕೆ)


## ಸಾಹಿತ್ಯ ಸಮ್ಮೇಳನ ಮುಂದಕ್ಕೆ

ಬೆಂಗಳೂರು, ಫೆ.5- ಹಾವೇರಿಯಲ್ಲಿ ಫೆಬ್ರವರಿ ಅಂತ್ಯದಲ್ಲಿ ನಡೆಸಲು ನಿಗದಿಯಾಗಿದ್ದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ತಾತ್ಕಾಲಿಕವಾಗಿ ಮುಂದೂಡಲು ನಿರ್ಧರಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದ್ದಾರೆ.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ನಡೆದ ಸಭೆಯ ನಂತರ ಅವರು, ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನದ ಸಿದ್ಧತೆಗಳು ಅಪೂರ್ಣವಾಗಿವೆ, ಭಾರೀ ಸಂಖ್ಯೆಯಲ್ಲಿ ಜನ ಸೇರುವುದರಿಂದ ಕೋವಿಡ್ ನಿಯಮಗಳ ಪಾಲನೆ ಕಷ್ಟವಾಗಲಿದೆ ಎಂದರು.

ಫೆಬ್ರವರಿ ಅಂತ್ಯಕ್ಕೆ ಹೊಸ ಕೋವಿಡ್ ಮಾರ್ಗಸೂಚಿ ಪ್ರಕಟವಾಗುವ ನಿರೀಕ್ಷೆ ಇರುವುದರಿಂದ ಮಾರ್ಚ್ 9ಕ್ಕೆ ಮತ್ತೊಮ್ಮೆ ಸಭೆ ನಡೆಸಿ ಸಮ್ಮೇಳನ ನಡೆಸುವ ದಿನಾಂಕ ನಿರ್ಧರಿಸಲಾಗುವುದು ಎಂದು ಹೇಳಿದ್ದಾರೆ.

ಸಭೆಯಲ್ಲಿ ಸಚಿವರಾದ ಬಸವರಾಜ ಬೊಮ್ಮಾಯಿ, ಬಿ.ಸಿ.ಪಾಟೀಲ್, ಆರ್. ಶಂಕರ್, ಶಾಸಕ ನೆಹರು ಓಲೇಕಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್ ಹಾಗೂ ಹಾವೇರಿ ಜಿಲ್ಲಾಡಳಿತದ ಅಧಿಕಾರಿಗಳು ಭಾಗವಹಿಸಿದ್ದರು.

# ದೇವಿಕೆರೆ ಗ್ರಾ.ಪಂ.ನಲ್ಲಿ ಬಿಜೆಪಿ - ಜೆಡಿಎಸ್ ದೋಸ್ತಿ

## ಅಧ್ಯಕ್ಷರಾಗಿ ಸದಾಶಿವಪ್ಪ, ಉಪಾಧ್ಯಕ್ಷರಾಗಿ ಓಬಪ್ಪ ಆಯ್ಕೆ



ಜಗಳೂರು, ಫೆ.5 - ತಾಲ್ಲೂಕಿನ ದೇವಿಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕೆ.ಬಿ. ಸದಾಶಿವಪ್ಪ ಗೆಲುವು ಸಾಧಿಸಿದ್ದಾರೆ. ಉಪಾಧ್ಯಕ್ಷರಾಗಿ ಓಬಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ರವಿಚಂದ್ರ ಬಸವಾಪುರ ಹಾಗೂ ಬಿಜೆಪಿ, ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಕೆ.ಸದಾಶಿವಪ್ಪ ಅವರು ನಾಮಪತ್ರ ಸಲ್ಲಿಸಿದ್ದರು. ಒಟ್ಟು 22 ಸ್ಥಾನಗಳಿರುವ ಪಂಚಾಯಿತಿಯಲ್ಲಿ 14 ಸದಸ್ಯರುಗಳು ಸದಾಶಿವಪ್ಪ ಅವರಿಗೆ ಮತ ಚಲಾಯಿಸಿದರು. ಕಾಂಗ್ರೆಸ್‌ನ ರವಿ ಚಂದ್ರ ಬಸವಾಪುರ ಅವರು 8 ಮತಗಳನ್ನು ಪಡೆದರು. 14 ಮತಗಳನ್ನು ಪಡೆದಿರುವ ಸದಾಶಿವಪ್ಪ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಓಬಪ್ಪ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಓಬಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣೆ ಅಧಿಕಾರಿ ಹಾಗೂ ಪಶು ವೈದ್ಯಕೀಯ ಇಲಾಖೆ ಸಹಾಯಕ ನಿರ್ದೇಶಕ ಲಿಂಗರಾಜ್ ಘೋಷಿಸಿದರು.

**ಬಿಜೆಪಿ-ಜೆಡಿಎಸ್ ದೋಸ್ತಿ : ಕಾಂಗ್ರೆಸ್‌ಗೆ ಮುಖಭಂಗ :** ತಾಲ್ಲೂಕಿನಲ್ಲಿ ಹಾವು, ಮುಂಗಸಿಯಂತೆ ವರ್ತಿಸುತಿದ್ದ ಬಿಜೆಪಿ, ಜೆಡಿಎಸ್ ಮುಖಂಡರುಗಳು ಇದೇ ಮೊದಲ ಬಾರಿಗೆ ಮೈತ್ರಿ ಮಾಡಿಕೊಂಡು ಕಾಂಗ್ರೆಸೆಗೆ ಶಾಕ್ ನೀಡಿದ್ದಾರೆ. ಕಾಂಗ್ರೆಸ್ ಮುಖಂಡ ರವಿಚಂದ್ರ, ಬಸವಾಪುರ, ದೇವಿಕೆರೆ ಗ್ರಾಪಂನಲ್ಲಿ ಕಳೆದ 15 ವರ್ಷಗಳಿಂದ ಸತತವಾಗಿ ಆಯ್ಕೆಯಾಗುತ್ತಾ ಪಂಚಾಯಿತಿಯಲ್ಲಿ ಅಧಿಕಾರ ನಡೆಸಿದ್ದರು. ಬಿಜೆಪಿ-ಜೆಡಿಎಸ್ ದೋಸ್ತಿಯಿಂದಾಗಿ ತೀವ್ರ ಹಿನ್ನಡೆ ಅನುಭವಿಸಿದ್ದಾರೆ.


**ಪೊಲೀಸ್ ಬಿಗಿ ಬಂದೋಬಸ್ತ್ :** ಡಿವೈಎಸ್ ಪಿ ನರಸಿಂಹ ತಾಮ್ರುಧ್ವಜ್ ಹಾಗೂ ಸಿಪಿಐ ಡಿ.ದುರುಗಪ್ಪ ಅವರ ನೇತೃತ್ವದಲ್ಲಿ ಚುನಾವಣೆ ಮುಗಿಯುವವರೆಗೂ ಗ್ರಾ.ಪಂ ಕಛೇರಿ ಸುತ್ತ ನಿಷೇಧಾಜ್ಞೆ ಹೊರಡಿಸಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು.

ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್ ಪಲ್ಲಾಗಟ್ಟೆ ಪ್ರತಿಕ್ರಿಯಿಸಿ, ದೇವಿಕೆರೆ ಗ್ರಾ.ಪಂ.ನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಹೊಂದಾಣಿಕೆ ಮೇರೆಗೆ ಅಧ್ಯಕ್ಷರಾಗಿ ಸದಾಶಿವಪ್ಪ ಹಾಗೂ ಉಪಾಧ್ಯಕ್ಷರಾಗಿ ಓಬಪ್ಪ ಆಯ್ಕೆಯಾಗಿದ್ದು ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕೆಲಸಗಳಿಗೆ ಒತ್ತು ನೀಡಲಿದ್ದಾರೆ ಎಂದು ತಿಳಿಸಿದರು.

ಜಿ.ಪಂ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಕೆ. ಮಂಜುನಾಥ್ ಪ.ಪಂ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ವಿ ಎಸ್ ಎಸ್ ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಮುಖಂಡರಾದ ರುದ್ರೇಶ್, ಮೋಹನ್, ಶೆಟ್ಟಿಗೊಂಡನಹಳ್ಳಿ ರಾಜು, ನಾಗರಾಜ್ ಸೇರಿದಂತೆ ಕಾರ್ಯಕರ್ತರು ಶುಭ ಕೋರಿದರು.

ಈ ಸಂದರ್ಭದಲ್ಲಿ ಪಿಡಿಓ ಸುಧೀಶ್, ಗ್ರಾ.ಪಂ ಸದಸ್ಯರಾದ ಶರಣಮ್ಮ, ನಾಗರಾಜ್, ಗುರುಸ್ವಾಮಿ, ರವಿಕುಮಾರ್, ಮಲ್ಲಮ್ಮ, ಇಂದಿರಮ್ಮ, ತಿಪ್ಪಮ್ಮ, ಅಂಜಿನಪ್ಪ, ಅಂಜಿನಮ್ಮ, ಶಾಂತಕುಮಾರ್, ಬಸವರಾಜಪ್ಪ, ಪಾರ್ವತಮ್ಮ, ರೇಖಮ್ಮ, ಚೌಡಮ್ಮ, ಕರಿಬಸಮ್ಮ, ಆರ್.ಎಂ ವೀರೇಶ್, ನೀಲಮ್ಮ, ಮಂಜಮ್ಮ, ಗಿರಿಜಮ್ಮ ಉಪಸ್ಥಿತರಿದ್ದರು.

## ರಾಜನಹಳ್ಳಿಯಲ್ಲಿ ಸಾಮೂಹಿಕ ವಿವಾಹ



ಮಲೇಬೆನ್ನೂರು, ಫೆ.5 - ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8 ಮತ್ತು 9 ರಂದು ಹಮ್ಮಿಕೊಂಡಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆಯ ಅಂಗವಾಗಿ ಫೆ.8ರಂದು ಸಾಮೂಹಿಕ ವಿವಾಹ ಮಹೋತ್ಸವವನ್ನು ಶ್ರೀವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಲಾಗಿದೆ.

ಸಾಮೂಹಿಕ ವಿವಾಹ ಆಗಲಿಚ್ಚಿಸುವವರು ನಾಳೆ ದಿನಾಂಕ 6ರೊಳಗಾಗಿ ರಾಜನಹಳ್ಳಿ ಮಠದಲ್ಲಿ ಹೆಸರು ನೋಂದಾಯಿಸುವಂತೆ ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ವಾಲ್ಮೀಕಿ ಜಾತ್ರಾ ಸಮಿತಿ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 8792290513.

# ಕಾನೂನಿಗೆ ಹೆದರಿ ಹೆಲ್ಮೆಟ್ ಹಾಕುವ ಬದಲು, ಪ್ರಾಣ ರಕ್ಷಣೆಗಾಗಿ ಹೆಲ್ಮೆಟ್ ಧರಿಸಬೇಕು




ಹರಿಹರ, ಫೆ.5- ಜಿಲ್ಲಾ ಪೊಲೀಸ್ ಗ್ರಾಮಾಂತರ ಉಪವಿಭಾಗ, ಹರಿಹರ ನಗರ ಠಾಣೆ ಮತ್ತು ವೃತ್ತ ನಿರೀಕ್ಷಕ ಠಾಣೆ ಹಾಗೂ ಗುತ್ತೂರು ಗ್ರಾಮಾಂತರ ಠಾಣೆ ಇವರ ಸಂಯುಕ್ತಾಶ್ರಯದಲ್ಲಿ ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿಕೊಂಡು ಚಾಲನೆ ಮಾಡಬೇಕೆಂದು ಬೈಕ್ ರ್‍ಯಾಲಿ ಮುಖಾಂತರ ಜಾಗೃತಿ ಕಾರ್ಯಕ್ರಮವನ್ನು ಇಂದು ನಗರದಲ್ಲಿ ನಡೆಸಲಾಯಿತು.

ಈ ಸಂದರ್ಭದಲ್ಲಿ ನಗರ ವೃತ್ತ ನಿರೀಕ್ಷಕ ಸತೀಶ್ ಕುಮಾರ್ ಮಾತನಾಡಿ, ಅಪಘಾತ ನಡೆದ ಬಳಿಕ ಜಾಗೃತಿ ವಹಿಸುವುದರ ಬದಲು ಅಪಘಾತ ನಡೆಯದಂತೆ ಜಾಗೃತಿ ವಹಿಸಿದರೆ ಅಪಘಾತಗಳನ್ನು ತಡೆಗಟ್ಟಲು ಸಾಧ್ಯ. ಪ್ರತಿಯೊಬ್ಬ ದ್ವಿಚಕ್ರ ವಾಹನ ಸವಾರರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸಿಕೊಂಡು ಚಾಲನೆ ಮಾಡಬೇಕು. ನಿಮ್ಮ ಬೈಕ್ ವಾಹನಗಳ ಇನ್ಸೂರೆನ್ಸ್ ಚಾಲನಾ ಪರವಾನಗಿ ಇನ್ನಿತರೆ ವಾಹನಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಅಧಿಕೃತವಾಗಿ ಕ್ರೋಢೀಕರಿಸಿ ತಮ್ಮ ಬಳಿ ಇಟ್ಟುಕೊಳ್ಳಬೇಕು. ಅಪಘಾತಗಳು ಸಂಭವಿಸಿದರೆ ಸಾವು-ನೋವುಗಳು ಸಂಭವಿಸಿದಾಗ ಪರಿಹಾರವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ವಾಹನ ಸವಾರರು ಅಪಘಾತ ಆಗುವ ಮುನ್ನವೇ ಎಚ್ಚರಗೊಂಡು ಹೆಲ್ಮೆಟ್ ಧರಿಸಿಕೊಂಡು ಚಾಲನೆ ಮಾಡಿ, ತಮ್ಮ ವಾಹನಗಳ ಪರವಾನಗಿ, ದಾಖಲಾತಿಗಳನ್ನು ಮಾಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಗತ್ತಿನಲ್ಲಿ ಅತೀ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ದೇಶ ಭಾರತವಾಗಿದೆ. ಚಾಲಕರು ಹಾಗೂ ಜನಸಾಮಾನ್ಯರು ರಸ್ತೆ ನಿಯಮಗಳ ಪಾಲನೆ ಬಗ್ಗೆ ಗಮನ ನೀಡದಿದ್ದರೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಾ ಸಾಗುತ್ತದೆ. ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಹಾಕಿಕೊಳ್ಳಬೇಕು ಎಂಬ ಕಾನೂನು ಜಾರಿ ಇರುವ ಹಿನ್ನೆಲೆಯಲ್ಲಿ ಕಾನೂನಿಗೆ ಹೆದರಿ ಹೆಲ್ಮೆಟ್ ಹಾಕುವ ಬದಲು ನಿಮ್ಮ ಪ್ರಾಣ ರಕ್ಷಣೆಗಾಗಿ ಹೆಲ್ಮೆಟ್ ಹಾಕಿಕೊಳ್ಳಬೇಕೆಂಬ ಅರಿವು ಪ್ರತಿಯೊಬ್ಬರಲ್ಲಿ ಮೂಡಬೇಕು ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಡಿವೈಎಸ್ಪಿ ನರಸಿಂಹರಾಜು ತಾಮ್ರುಧ್ವಜ, ಗ್ರಾಮಾಂತರ ಠಾಣೆಯ ಪಿಎಸ್ಐ ಡಿ. ರವಿಕುಮಾರ್, ಮಲೇಬೆನ್ನೂರು ಪಿಎಸ್ಐ ವೀರಬಸಪ್ಪ ಕಳಸಾಪುರ, ನಗರ ಠಾಣೆ ಪಿಎಸ್ಐ ಸುನಿಲ್ ಬಸವರಾಜ ತೇಲಿ ಮತ್ತಿತರರು ಬೈಕ್ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.

# ಹೊನ್ನಾಳಿ : ಕುರುಬರ ಎಸ್ಟಿ ಹೋರಾಟಕ್ಕೆ ಮಹಿಳೆಯರಿಂದ ಬೆಂಗಳೂರು ಚಲೋ

ಹೊನ್ನಾಳಿ, ಫೆ.5- ರಾಜ್ಯದ ಯಾದಗಿರಿ, ಕೊಡಗು, ಮೈಸೂರು ಹಾಗೂ ಬೀದರ್ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿರುವ ಕುರುಬರ ಎಸ್ಟಿ ಮೀಸಲಾತಿ ಸೌಲಭ್ಯವನ್ನು ಇಡೀ ರಾಜ್ಯಕ್ಕೇ ವಿಸ್ತರಿಸಬೇಕು ಎಂದು ಹೊನ್ನಾಳಿ ತಾಲ್ಲೂಕು ಎಸ್ಟಿ ಮೀಸಲಾತಿ ಹೋರಾಟ ಸಮಿತಿ ಮಹಿಳಾ ಘಟಕದ ಅಧ್ಯಕ್ಷರಾದ ಪಂಕಜಾ ಅರುಣ್ ಕುಮಾರ್ ಹೇಳಿದರು.



ನಾಡಿದ್ದು ದಿನಾಂಕ 7 ರಂದು ನಡೆಯುವ ಬೆಂಗಳೂರು ಎಸ್ಟಿ ಹೋರಾಟ ಸಮಾವೇಶದ ಹಿನ್ನೆಲೆಯಲ್ಲಿ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಹೋರಾಟಕ್ಕೆ ತಾಲ್ಲೂಕಿನ ಹಾಲುಮತ ಮಹಿಳಾ ಪದಾಧಿಕಾರಿಗಳ ಸಮಿತಿಯು ಕೈಜೋಡಿಸಿ, ಭಾಗವಹಿಸಲಿದ್ದಾರೆ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಎಸ್. ಸೌಮ್ಯ ಹಾಗೂ ನಿರ್ಮಲ ಮಾತನಾಡಿ, ಹೊನ್ನಾಳಿಯಿಂದ ಮಹಿಳಾ ಸಂಘಟನೆಯ 40 ಜನ ಪದಾಧಿಕಾರಿಗಳು ಬೆಂಗಳೂರು ಸಮಾವೇಶಕ್ಕೆ ಹೋಗುವ ಮೂಲಕ ಹೋರಾಟಕ್ಕೆ ಬಲ ತುಂಬಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ಎಸ್ಟಿ ಹೋರಾಟ ಸಮಿತಿ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಹೇಮಾ ಆಂಜನೇಯ, ಅಶ್ವಿನಿ ರುದ್ರೇಶ್, ಉಪಾಧ್ಯಕ್ಷೆ ಕರಿಬಸಮ್ಮ ರಾಜಪ್ಪ, ಸಂಘಟನಾ ಕಾರ್ಯದರ್ಶಿ ಸುಧಾ ಮರಿಸಿದ್ದಪ್ಪ, ಸಂಚಾಲಕಿ ಶೈಲಜಾ ಇನ್ನಿತರರಿದ್ದರು.

# ಹರಪನಹಳ್ಳಿ ತಾ|| 9 ಗ್ರಾ.ಪಂ.ಗಳಿಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ

ಹರಪನಹಳ್ಳಿ, ಫೆ.5 - ತಾಲ್ಲೂಕಿನಲ್ಲಿ 9 ಗ್ರಾಮ ಪಂಚಾಯಿತಿಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅಯ್ಕೆ ಪ್ರಕ್ರಿಯೆ ಶುಕ್ರವಾರ ನಡೆಯಿತು. ಗುಂಡಗತ್ತಿ, ನೀಲಗುಂದ, ತೊಗರಿಕಟ್ಟಿ, ಮಾಡ್ಲಿಗೇರಿ, ಪುಣಭಗಟ್ಟಿ, ಮೈದೂರು, ನಿಚ್ಚವ್ವನಹಳ್ಳಿ, ಹಿರೇಮೆಗಳಗೇರಿ, ಹಲುವಾಗಲು ಗ್ರಾಪಂಗಳಿಗೆ ಚುನಾವಣೆ ನಡೆಯಿತು.




14 ಸದಸ್ಯರಿದ್ದ ನಿಚ್ಚವ್ವನಹಳ್ಳಿ ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಗಂಗಿಬಾಯಿ ದೊಡ್ಡಮನಿ, ಉಪಾಧ್ಯಕ್ಷರಾಗಿ ನ್ಯಾಯವಾದಿ ಕಾಂಗ್ರೆಸ್ ಬೆಂಬಲಿತ ಕಂಚಿಕೇರಿ ಆನಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಕೆ. ಪರಶುರಾಮಪ್ಪ, ಚೀಗಟೇರಿ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ಮುಖಂಡರಾದ ಮಂಜುನಾಥ, ಬಸಾಪುರದ, ಮಂಜುನಾಥ, ವೃಷಬೇಂದ್ರಪ್ಪ, ಶಿರಾಜ್, ಸೋಮನಾಥ ಪಟೇಲ್, ಪಿ.ಪರುಶುರಾಮ, ಸನಾವುಲ್ಲಾ, ವಿರೂಪಾಕ್ಷಪ್ಪ, ಪಿ.ಡಿ.ಓ.ಮುಕ್ತರ್ ಆಲಿ ಸೇರಿದಂತೆ ಇತರರು ಇದ್ದರು ಚುನಾವಣೆ ಅಧಿಕಾರಿಯಾಗಿ ಆನಂದ ಡೊಳ್ಳಿನ ಕಾರ್ಯ ನಿರ್ವಹಿಸಿದರು.

ಒಟ್ಟು 12 ಸದಸ್ಯರಿದ್ದ ಗುಂಡಗತ್ತಿ ಗ್ರಾ ಪಂಗೆ ಸಿಪಿಇಡಿ ಪದವೀಧರ ಕೆ.ಪ್ರಕಾಶ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಮಂಜಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಗ್ರಾಪಂ ಕಾಂಗ್ರೆಸ್ ಬೆಂಬಲಿತರು ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ.

ಈ ಸಂದರ್ಭದಲ್ಲಿ ಎಂ.ಪಿ. ಪ್ರಕಾಶ ಸಮಾಜ ಮುಖಿ ಟ್ರಸ್ಟ್ ಅಧ್ಯಕ್ಷರಾದ ಎಂ.ಪಿ. ವೀಣಾ ಮಹಾಂತೇಶ ಚರಂತಿ ಮಠ್, ಕೊಟ್ರೇಶ, ವೈ. ರಾಜಪ್ಪ ಕೆಂಚಪ್ಪ, ಸೇರಿದಂತೆ ಇತರರು ಇದ್ದರು.

# ಬಸವರಾಜ ಐರಣಿಗೆ ನಾಟಕ ಅಕಾಡೆಮಿ ಪ್ರಶಸ್ತಿ

**ಸೇತೂರಾಂಗೆ ನಾಟಕ ಅಕಾಡೆಮಿ ಜೀವಮಾನದ ರಂಗ ಗೌರವ ಪ್ರಶಸ್ತಿ**

**(1ನೇ ಪುಟದಿಂದ)** ಹಿರಿಯ ರಂಗ ಭೂಮಿ ಕಲಾವಿದರೂ, ಹಿರಿಯ ಕನ್ನಡಪರ ಹೋರಾಟಗಾರರೂ, ಹಿರಿಯ ಪತ್ರಕರ್ತರೂ ಆಗಿರುವ ಬಸವರಾಜ ಐರಣಿ ಸೇರಿದಂತೆ 25 ಸಾಧಕರನ್ನು ವಾರ್ಷಿಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಬರುವ ಮಾರ್ಚ್ ತಿಂಗಳಲ್ಲಿ ಬಳ್ಳಾರಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅಕಾಡೆಮಿ ತಿಳಿಸಿದೆ.

ಕಲ್ಚರ್ಡ್ ಕೆಮೆಡಿಯನ್ ಕೆ.ಹಿರಣ್ಣಯ್ಯ ದತ್ತಿ ಪುರಸ್ಕಾರವನ್ನು ಬೆಂಗಳೂರಿನ ಮಾ.ಭಾಸ್ಕರ ಪಡೆದುಕೊಂಡಿದ್ದಾರೆ. ನಟರತ್ನ ಚಿಂದೋಡಿ ವೀರಪ್ಪನವರ ದತ್ತಿ ಪುರಸ್ಕಾರ ಪ್ರಶಸ್ತಿಯನ್ನು ಕೊಪ್ಪಳದ ವೆಂಕಣ್ಣ ಕಾಮನೂರು, ಪದ್ಮಶ್ರೀ ಚಿಂದೋಡಿ ಲೀಲಾ ದತ್ತಿ ಪುರಸ್ಕಾರ ಪ್ರಶಸ್ತಿಯನ್ನು ಧಾರವಾಡದ ಅನ್ನಪೂರ್ಣ ಹೊಸಮನಿ ಪಡೆದುಕೊಂಡಿದ್ದಾರೆ. ಕೆ.ರಾಮಚಂದ್ರಯ್ಯ ದತ್ತಿನಿಧಿ ಪುರಸ್ಕಾರವನ್ನು ಬೆಳಗಾವಿಯ ರಂಗಸಂಪದ ಪಡೆದುಕೊಂಡಿದೆ.

ಶ್ರೀಮತಿ ಮಾಲತಿಶ್ರೀ, ಮೈಸೂರು ದತ್ತಿನಿಧಿ ಪುರಸ್ಕಾರಕ್ಕೆ ಧಾರವಾಡದ ಸುನಂದಾ ಹೊಸಪೇಟೆ ಪಾತ್ರರಾಗಿದ್ದಾರೆ.

ವಾರ್ಷಿಕ ರಂಗ ಪ್ರಶಸ್ತಿಗೆ ಆಯ್ಕೆಯಾಗಿರುವ ಇತರರೆಂದರೆ : ಕಲಬುರ್ಗಿಯ ಸಂತೋಷ ಕುಮಾರ ಕುಸನೂರು, ರಾಯಚೂರಿನ ಎಂ.ಇಸ್ಮಾಯಿಲ್ ಸಾಬ್, ಕೊಪ್ಪಳದ ಭರಮಪ್ಪ ಜುಟ್ಲದ, ಬಳ್ಳಾರಿಯ ಮಾ.ಭ.ಸೋಮಣ್ಣ ಹಾಗೂ ಗೆಣಿಕೆಹಾಳು ತಿಮ್ಮನಗೌಡ ಮೇಲುಸೀಮೆ, ವಿಜಯಪುರದ ಗುರುಬಸಪ್ಪ ಕಲ್ಲಪ್ಪ ಸಜ್ಜನ, ಬಾಗಲಕೋಟೆಯ ಹಣಮವ್ವ ಗಾಜರ ಕುಳಲಿ ಹಾಗೂ ಪಿ. ಧಗಳಚಂದ್ರ ಪವಾರ, ಗದಗದ ಉಮಾದೇವಿ ಹಿರೇಮಠ, ಧಾರವಾಡದ ಬಸವರಾಜ ಕಡ್ಲೆಣ್ಣನವರ, ಚಿತ್ರದುರ್ಗದ ನೂರಜಹಾನ ಗೊರಜಿನಾಳ್, ಚಿಕ್ಕಮಗಳೂರಿನ ಮಹಾವೀರ ಜೈನ್, ಮೈಸೂರಿನ ಅಶ್ವತ್ಥ ಕದಂಬ, ಕೊಡಗಿನ ಎಂ.ಆರ್. ಚಂದ್ರಶೇಖರಯ್ಯ, ಮಂಡ್ಯದ ಧನ್ಯಕುಮಾರ, ಚಾಮರಾಜನಗರದ ವೆಂಕಟರಮಣಸ್ವಾಮಿ, ಉಡುಪಿಯ ಶ್ರೀನಿವಾಸ ಪ್ರಭು ಉಪ್ಪುಂದ, ಮಂಗಳೂರಿನ ರೋಹಿಣಿ ಜಗರಾಂ, ಬೆಂಗಳೂರು ಗ್ರಾಮಾಂತರದ ಕೆ.ಎನ್.ವಾಸುದೇವ ಮೂರ್ತಿ, ಬೆಂಗಳೂರು ನಗರದ ವಿ.ಲಕ್ಷ್ಮೀಪತಿ, ಎಂ.ಎಸ್.ವಿದ್ಯಾ, ಬಿ.ಎನ್. ಮಂಜುಳಾ, ಗೀತಾ ಸುರತ್ಕಲ್, ಬಾಬು ಹಿರಣ್ಣಯ್ಯ.

# ಪಂಚಮಸಾಲಿ 2ಎ ಮೀಸಲಾತಿ : ವರದಿಗೆ ಸಿಎಂ ಸೂಚನೆ

**(1ನೇ ಪುಟದಿಂದ)** ಇಂತಹ ವಿಷಯಗಳ ಬಗ್ಗೆ ಪ್ರಧಾನ ಮಂತ್ರಿ ಮತ್ತಿತರ ಬಳಿ ಚರ್ಚಿಸಿ ಮುಂದಿನ ಹೆಜ್ಜೆ ಇಡಬೇಕಾಗುತ್ತದೆ. ಹೀಗಿರುವಾಗ ಈ ವಿಷಯದಲ್ಲಿ ನಾನು ಏನೂ ಮಾಡುವ ಸ್ಥಿತಿಯಲ್ಲಿಲ್ಲ ಎಂದಿದ್ದರು. ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಪಂಚಮಸಾಲಿ ಸಮುದಾಯದ 2ಎ ಮೀಸಲಾತಿ ಬೇಡಿಕೆಯ ಕುರಿತು ಹೇಳಿಕೆ ನೀಡುವಂತೆ ಕೇಳಿದಾಗ ಯಡಿಯೂರಪ್ಪ ಕೇಂದ್ರ ಸರ್ಕಾರದ ಕಡೆ ಬೆರಳು ಮಾಡಿದ್ದರು.

ನಂತರ ನಿಲುವು ಬದಲಿಸಿರುವ ಯಡಿಯೂರಪ್ಪ, ಆಯೋಗದಿಂದ ವರದಿ ಪಡೆದುಕೊಳ್ಳಲು ಮುಂದಾಗಿದ್ದಾರೆ.

ಸದನದಲ್ಲಿ ಯಡಿಯೂರಪ್ಪ ನೀಡಿದ ಹೇಳಿಕೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ, ಮುಖ್ಯಮಂತ್ರಿ ನಿನ್ನೆಯಷ್ಟೇ ಸಮುದಾಯದ ಶಾಸಕರು ಹಾಗೂ ಸಚಿವರನ್ನು ತಮ್ಮ ಬಳಿ ಕಳಿಸಿ ಮೀಸಲಾತಿಯ ಭರವಸೆ ಕೊಡಿಸಿದ್ದರು. ನಂತರ ಸದನದಲ್ಲಿ ಬೇರೆ ಹೇಳಿಕೆ ನೀಡಿದ್ದಾರೆ. ಅವರು ದಿನಕ್ಕೊಂದು ಹೇಳಿಕೆ ನೀಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಯಡಿಯೂರಪ್ಪ ವಯೋಸಹಜ ಕಾಯಿಲೆಯಿಂದ ಹಾಗೂ ಬುದ್ಧಿಭ್ರಮಣೆಯಿಂದ ಬಳಲುತ್ತಿದ್ದಾರೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದೂ ಸ್ವಾಮೀಜಿ ತರಾಟೆಗೆ ತೆಗೆದುಕೊಂಡಿದ್ದಾರೆ. ಮೀಸಲಾತಿಗಾಗಿ ಪಾದಯಾತ್ರೆ ಕೈಗೊಂಡಿರುವ ಸ್ವಾಮೀಜಿ, ಈಗ ಚಿತ್ರದುರ್ಗದಲ್ಲಿದ್ದಾರೆ.

ನಮ್ಮ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿದ್ದು ಇನ್ನು ಸಾಕು. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಯಡಿಯೂರಪ್ಪನವರನ್ನು ಗೌರವಯುತವಾಗಿ ಪದಚ್ಯುತಗೊಳಿಸಲಿ. ಮತ್ತೊಬ್ಬ ಸಮರ್ಥ ಲಿಂಗಾಯತರನ್ನು ಮುಖ್ಯಮಂತ್ರಿ ಮಾಡುವ ಪ್ರಯತ್ನ ಮಾಡಲಿ ಎಂದಿದ್ದರು.

ನರೇಂದ್ರ ಮೋದಿ ಅವರಾಗಲೀ, ನಡ್ಡಾ ಆಗಲೀ ಈ ರಾಜ್ಯದ ಮುಖ್ಯಮಂತ್ರಿಗಳಲ್ಲ. ಪಂಚಮಸಾಲಿಗಳಿಗೆ ಮೀಸಲಾತಿ ಕೊಡುವ ಪರಮಾಧಿಕಾರ ರಾಜ್ಯದ ಮುಖ್ಯಮಂತ್ರಿ ಬಳಿ ಇದೆ. ವಿನಾ ಕಾರಣ ಕೇಂದ್ರದ ಕಡೆ ಬೊಟ್ಟು ಮಾಡಿ, ಕೇಂದ್ರದ ವಿರುದ್ಧ ಈ ಸಮುದಾಯ ಎತ್ತಿ ಕಟ್ಟುವ ಕೆಲಸ ಮಾಡುತ್ತಿದ್ದಾರೆ. ಕೇಂದ್ರದ ವರಿಷ್ಠರು ಯಡಿಯೂರಪ್ಪ ಪದಚ್ಯುತಿ ನಿರ್ಧಾರವನ್ನು ತೆಗೆದುಕೊಳ್ಳುವ ಸಂದರ್ಭ ಬಂದರೆ, ಲಿಂಗಾಯತರನ್ನು ಎತ್ತಿ ಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದರು.

ಯಡಿಯೂರಪ್ಪನವರು ಕೇಂದ್ರದ ಕಡೆ ತೋರಿಸುತ್ತಾ 25 ಜನ ಸಂಸದರನ್ನು ಕರೆದುಕೊಂಡು ವರಿಷ್ಠರ ಬಳಿ ಹೋಗಿ ಎನ್ನುತ್ತಿದ್ದಾರೆ ಎಂದರೆ ಅವರು ಸಂವಿಧಾನ ಓದಿದ್ದಾರಾ ಎಂಬ ಅನುಮಾನವಾಗುತ್ತಿದೆ. ಮೂರು ಬಾರಿ ಮುಖ್ಯಮಂತ್ರಿಗಳಾಗಿರುವ ಯಡಿಯೂರಪ್ಪನವರಿಗೆ, ಮೀಸಲಾತಿ ಕೊಡುವ ಅಧಿಕಾರ ಕೇಂದ್ರಕ್ಕಿದೆಯೋ, ರಾಜ್ಯ ಸರ್ಕಾರಕ್ಕಿದೆಯೋ ಎಂಬುದು ಗೊತ್ತಿಲ್ಲವೇ? ಎಂದು ಸ್ವಾಮೀಜಿ ಕೇಳಿದ್ದಾರೆ.

ಸ್ವಾಮೀಜಿ ಆಕ್ರೋಶದ ಬಗ್ಗೆ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿರುವ ಯಡಿಯೂರಪ್ಪ, ಅಧಿವೇಶನದಲ್ಲಿ ನನ್ನ ಹೇಳಿಕೆಯನ್ನು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಅಪಾರ್ಥ ಮಾಡಿಕೊಂಡಿದ್ದಾರೆ. 2ಎ ಮೀಸಲಾತಿಗೆ ಸೇರಿಸಲು ಸಮಾಜದ ಮುರುಗೇಶ ನಿರಾಣಿ ಹಾಗೂ ಸಿ.ಸಿ. ಪಾಟೀಲ ಒಳಗೊಂಡು ಹಲವಾರು ಶಾಸಕರ ಜೊತೆ ಚರ್ಚೆ ಮಾಡಿದ್ದೇನೆ.

ಹಿಂದುಳಿದ ವರ್ಗಗಳ ಆಯೋಗಕ್ಕೆ ಈ ವಿಷಯದ ಅಧ್ಯಯನ ಮಾಡಿ ವರದಿ ಸಲ್ಲಿಸಲು ಕೇಳಿದ್ದೇನೆ ಎಂದಿದ್ದಾರೆ.

ನಮ್ಮ ಸರ್ಕಾರ ಈ ಹಿಂದೆ ಪಂಚಮಸಾಲಿ ಸಮಾಜವನ್ನು 3ಬಿಗೆ ಸೇರಿಸಿದ್ದನ್ನು ಇದೇ ವೇಳೆ ನೆನಪಿಸಿರುವ ಯಡಿಯೂರಪ್ಪ, ಸರ್ಕಾರ ತರಾತುರಿಯಲ್ಲಿ ನಿರ್ಧಾರ ತೆಗೆದುಕೊಳ್ಳದೇ ತಜ್ಞರೊಂದಿಗೆ ಸಮಗ್ರವಾಗಿ ಚರ್ಚಿಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುಂದುವರೆಯಬೇಕಾಗುತ್ತದೆ ಎಂದಿದ್ದಾರೆ.

## ರಿಸರ್ವ್ ಬ್ಯಾಂಕ್ ಬಡ್ಡಿ ದರ ಯಥಾಸ್ಥಿತಿ

**(1ನೇ ಪುಟದಿಂದ)** ವಿಸ್ತೃತವಾದ ವಿತ್ತೀಯ ಯೋಜನೆಯನ್ನು ಪ್ರಕಟಿಸಲಾಗಿದೆ. ರಿಸರ್ವ್ ಬ್ಯಾಂಕ್ ಇಂತಹ ಯೋಜನೆಗೆ ಸೂಕ್ತ ಹಣಕಾಸು ನೀತಿಗಳ ಮೂಲಕ ನೆರವಾಗಲಿದೆ ಎಂದು ದಾಸ್ ತಿಳಿಸಿದ್ದಾರೆ. ಸತತ ನಾಲ್ಕು ದ್ವೈಮಾಸಿಕಗಳಲ್ಲಿ ರಿಸರ್ವ್ ಬ್ಯಾಂಕ್ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಿದೆ. 2020ರಿಂದಲೂ ಹಣದುಬ್ಬರದ ಕಳವಳದಿಂದಾಗಿ ರಿಸರ್ವ್ ಬ್ಯಾಂಕ್ ಬಡ್ಡಿ ದರವನ್ನು ಯಥಾಸ್ಥಿತಿಯಲ್ಲಿರಿಸಿದೆ.

# ವೈಮನಸ್ಸು ಮರೆತು ಒಂದಾದ ಗುರು - ಶಿಷ್ಯರು !

**(1ನೇ ಪುಟದಿಂದ)** ತಾಲ್ಲೂಕಿನ ದ್ಯಾವಗೊಂಡನಹಳ್ಳಿ ಬಳಿಯ ಮೊರಾರ್ಜಿ ವಸತಿಯುತ ಶಾಲೆಯಲ್ಲಿ ನಡೆಸಿದ ತುರ್ತು ಪತ್ರಿಕಾ ಗೋಷ್ಠಿಯಲ್ಲಿ ಮುಖ್ಯಮಂತ್ರಿಗಳ ವರ್ತನೆ ಬಗ್ಗೆ ವ್ಯಾಕುಲತೆ ವ್ಯಕ್ತಪಡಿಸಿದರು.

ಕೂಡಲಸಂಗಮದ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿಯೊಂದಿಗೆ ಪಾದಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿರುವ ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಮತ್ತು ಹರಿಹರ ಕ್ಷೇತ್ರದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ವೇದಿಕೆ ಹಂಚಿಕೊಂಡಿದ್ದು ಭಕ್ತರಲ್ಲಿ ಆಶ್ಚರ್ಯವನ್ನುಂಟು ಮಾಡಿತು. ಗುರು - ಶಿಷ್ಯರು (ವಚನಾನಂದ ಶ್ರೀಗಳು ಹಾಗೂ ಶಿವಶಂಕರ್) ವೈಮನಸ್ಸು ಮರೆತು ಒಂದಾದ ಘಟನೆಗೆ ಪತ್ರಿಕಾಗೋಷ್ಠಿ ಸಾಕ್ಷಿಯಾಯಿತು.

ಬಸವನಗೌಡ ಪಾಟೀಲ್ ಯತ್ನಾಳ್, ರಾಣೇಬೆನ್ನೂರು ಶಾಸಕ ಅರುಣ್ ಕುಮಾರ ಪೂಜಾರ್, ಸಮಾಜದ ಮುಖಂಡರುಗಳಾದ ವಿಜಯಾನಂದ ಕಾಶೆಪ್ಪನವರ್, ಹನುಮಂತ ನಿರಾಣಿ, ನಂದಿಹಳ್ಳಿ ಹಾಲಪ್ಪ, ನಾಡಗೌಡ್ರು, ಬೇವಿನಮರದ ಸೋಮಣ್ಣ, ಚಂದ್ರಶೇಖರ ಪೂಜಾರ್, ದಾವಣಗೆರೆಯ ಮಹಾಂತೇಶ್ ಒಣರೊಟ್ಟಿ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಎಸ್ಸೆಸ್ ಕಾಲೇಜು : ಇಂದು ಪದವಿ ಪ್ರದಾನ ಸಮಾರಂಭ

ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದಲ್ಲಿ ಇಂದು ಸಂಜೆ 4.30 ಕ್ಕೆ ಕಾಲೇಜಿನ ಜ್ಞಾನಶಂಕರ ಆವರಣದಲ್ಲಿ ಹತ್ತನೆಯ ಪದವಿ ಪ್ರದಾನ ಸಮಾರಂಭ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಡಾ. ಕರಿಸಿದ್ದಪ್ಪ, ಗೌರವಾನ್ವಿತ ಅತಿಥಿಗಳಾಗಿ ಡಾ. ಶಾಮನೂರು ಶಿವಶಂಕರಪ್ಪ ಆಗಮಿಸುವರು. ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು. ವಿಶೇಷ ಆಹ್ವಾನಿತರಾಗಿ ಡಾ. ರವೀಂದ್ರ ಬಣಕಾರ್ ಆಗಮಿಸುವರು. ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ಉಪಸ್ಥಿತರಿರುವರು.


॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ**



ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ವಾಸಿ

**ಶ್ರೀಮತಿ ಕುಸುಮ**
**ಶ್ರೀ ಎಸ್.ಜಿ. ಕರಿಬಸಪ್ಪ**

ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ : 29.01.2021ನೇ ಶುಕ್ರವಾರ ಸಾಯಂಕಾಲ 5.00 ಕ್ಕೆ ನನ್ನ ತಂದೆಯವರಾದ

**ಶ್ರೀ ಸಣ್ಣಗೌಡ್ರು ಲಿಂಗರಾಜಪ್ಪನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**


ದಿ: 6.2.2021ನೇ ಶನಿವಾರ ಬೆಳಿಗ್ಗೆ 11.00ಕ್ಕೆ ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದ ಮೃತರ ಸ್ವಗೃಹದಲ್ಲಿ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಕುಸುಮ, ಶ್ರೀ ಎಸ್.ಜಿ. ಕರಿಬಸಪ್ಪ ಮತ್ತು ಮಕ್ಕಳು, ಶ್ರೀಮತಿ ಜಯಶ್ರೀ, ಶ್ರೀ ಎಂ. ಸಿದ್ದೇಶ್ ಮತ್ತು ಮಕ್ಕಳು, ಶ್ರೀಮತಿ ರೇಖಾ, ಶ್ರೀ ಎಂ. ಸುರೇಶ್ ಮತ್ತು ಮಕ್ಕಳು, ಸಣ್ಣಗೌಡ್ರ ವಂಶಸ್ಥರು, ಹಿರೇತೊಗಲೇರಿ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು,

**ಫೋ. : 78924 40199, 97397 36782**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಬಾವಿಹಾಳ್ ರೇವಣಸಿದ್ದಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಿ.ಕಲ್ಪನಹಳ್ಳಿ ಗ್ರಾಮದ ವಾಸಿ ಬಾವಿಹಾಳ್ ರೇವಣಸಿದ್ದಪ್ಪ (67) ಅವರು ದಿನಾಂಕ 5.02.2021 ರಂದು ಶುಕ್ರವಾರ ಸಂಜೆ 5.10 ನಿಧನರಾಗಿದ್ದಾರೆ. ಪತ್ನಿ, ನಾಲ್ವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.02.2021 ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಬಿ. ಕಲ್ಪನಹಳ್ಳಿಯ ಅವರ ಜಮೀನಿನಲ್ಲಿ ನೆರವೇರಲಿದೆ.

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಮೀಸಲಾತಿ ನನ್ನಿಂದ ಸಾಧ್ಯವಿಲ್ಲ

**(1ನೇ ಪುಟದಿಂದ)** ಇರುಸು-ಮುರುಸು ಮಾಡಿತು, ನಮ್ಮದು (ಬಿಜೆಪಿ) ಪ್ರಾದೇಶಿಕ ಪಕ್ಷ ವಲ್ಲ, ರಾಷ್ಟ್ರೀಯ ಪಕ್ಷ, ನನಗೆ ದೆಹಲಿಯ ನಾಯಕರಿದ್ದಾರೆ, ಅವರ ಮಾರ್ಗದರ್ಶನದಲ್ಲಿ ಆಡಳಿತ ನಡೆಸಬೇಕು, ನಮಗೂ ಇತಿ-ಮಿತಿ ಇದೆ ಎಂದರು. ಈ ಹೋರಾಟಗಳಿಗೆ ನಾನು ಸ್ಪಂದಿಸಲು ಸಾಧ್ಯವಿಲ್ಲ, ನೀವು ದೆಹಲಿಗೆ ನಿಯೋಗ ಕೊಂಡೊಯ್ಯಿರಿ ಎಂದು ಖಾರವಾಗಿ ತಿಳಿಸಿದ ಮುಖ್ಯಮಂತ್ರಿ, ನಮ್ಮವರೇ 25 ಸಂಸದರಿದ್ದಾರೆ, ಅವರನ್ನು ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರ ಮತ್ತು ಪಕ್ಷದ ನಾಯಕರ ಗಮನ ಸೆಳೆಯಿರಿ ಎಂದರು.

ಮುಖ್ಯಮಂತ್ರಿ ಅವರು ಈ ಮಾತು ಹೇಳಿ ಮುಗಿಸಿ ಮುಂದುವರೆಯುತ್ತಿದ್ದಂತೆ ಯತ್ನಾಳ್ ಕೋಪೋದ್ರಿಕ್ತರಾಗಿ ನೀವು ಅಧಿಕಾರಕ್ಕೆ ಬರಲು ಈ ಸಮುದಾಯವೂ ಕಾರಣ ಎಂದು ಹೇಳುತ್ತಿದ್ದಂತೆ, ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ನೀವು ಇಲ್ಲಿ ಈಗ ಈ ವಿಷಯವನ್ನು ಪ್ರಸ್ತಾಪಿಸಲು ಸಾಧ್ಯವಿಲ್ಲ, ಮುಂದೆ ನೋಡೋಣ ಎಂದಾಗಲೂ ಯತ್ನಾಳ್ ತಮ್ಮ ಪಟ್ಟನ್ನು ಮುಂದುವರೆಸುತ್ತಲೇ ಇದ್ದರು.

# ರಾಣೇಬೆನ್ನೂರಿನಲ್ಲಿ ನೂತನ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ

**ವಾಯುವ್ಯ ಕರಾರಸಾಸಂ ನಿರ್ದೇಶಕ ಸಂತೋಷಕುಮಾರ್ ಪಾಟೀಲ**

ರಾಣೇಬೆನ್ನೂರು, ಫೆ.5- ಜಿಲ್ಲೆಯಲ್ಲಿ ಅತಿ ದೊಡ್ಡ ತಾಲ್ಲೂಕು ಕೇಂದ್ರವಾದ ವಾಣಿಜ್ಯ ನಗರಿ ರಾಣೇಬೆನ್ನೂರಿನಲ್ಲಿ ಶೀಘ್ರದಲ್ಲಿಯೇ ನೂತನ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕ ಸಂತೋಷಕುಮಾರ ಪಾಟೀಲ ತಿಳಿಸಿದ್ದಾರೆ.

ನಗರದ ಬಸ್‌ನಿಲ್ದಾಣದಲ್ಲಿ ನಿತ್ಯ 900 ಬಸ್‌ಗಳು ಬಂದು ಹೋಗಲಿದ್ದು, 45 ರಿಂದ 50 ಸಾವಿರ ಪ್ರಯಾಣಿಕರು ಸಂಚರಿಸುತ್ತಿದ್ದಾರೆ. ಹೀಗಾಗಿ ಬಸ್‌ನಿಲ್ದಾಣ ಕಿರಿದಾಗಿದ್ದು, ಪ್ರಯಾಣಿಕರಿಗೆ ತೊಂದರೆಯಾಗುವ ಜತೆಗೆ ಬಸ್‌ಗಳ ಸಂಚಾರ ದಟ್ಟಣೆ ಹೆಚ್ಚಾಗಿ ಟ್ರಾಫಿಕ್ ಸಮಸ್ಯೆ ಎದುರಿಸಬೇಕಾಗಿದೆ. ಈಗಾಗಲೇ ಶಾಸಕರೊಂದಿಗೆ ಮಾತುಕತೆ ನಡೆಸಿದ್ದು, ನಗರದ ಹೊರವಲಯದಲ್ಲಿರುವ ದನದ ಮಾರುಕಟ್ಟೆಯಲ್ಲಿ 5 ಎಕರೆ ಜಮೀನು ನೀಡಬೇಕು ಎಂದು ಎಪಿಎಂಸಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಬಸ್ ನಿಲ್ದಾಣಕ್ಕೆ ಅನುದಾನ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಮೆಡ್ಲೇರಿ ರಸ್ತೆಯಲ್ಲಿ ಸಾರಿಗೆ ಇಲಾಖೆಗೆ ಸೇರಿದ 15 ಎಕರೆ ಜಮೀನು ಇದೆ. ಹುಬ್ಬಳ್ಳಿ ಬಿಟ್ಟರೆ ಬೇರೆಡೆ ಚಾಲಕರಿಗೆ ಹಾಗೂ ನಿರ್ವಾಹಕರಿಗೆ ತರಬೇತಿ ಹಾಗೂ ನೇಮಕಾತಿ ಕೇಂದ್ರವಿಲ್ಲ. ಹಾಗಾಗಿ ರಾಣೇಬೆನ್ನೂರಿನಲ್ಲಿ ಕೇಂದ್ರವನ್ನು ನಿರ್ಮಿಸುವ ಉದ್ದೇಶವಿದೆ ಎಂದರು.

ಕೋವಿಡ್ ಸಮಯದಲ್ಲಿ ಬಂದ್ ಆಗಿದ್ದ ಶಾಲಾ- ಕಾಲೇಜುಗಳು ಇತ್ತೀಚೆಗೆ ಆರಂಭವಾಗಿವೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಉದ್ದೇಶದಿಂದ ಬಸ್‌ಗಳ ಸಂಚಾರ ಆರಂಭಿಸಲಾಗಿದೆ. ನಮ್ಮ ನಿಗಮದ ವ್ಯಾಪ್ತಿಯಲ್ಲಿ ಯಾವುದೇ ಜಿಲ್ಲೆಯ ವಿದ್ಯಾರ್ಥಿಗಳಿಗೆ ಬಸ್‌ಗಳ ಸಮಸ್ಯೆಯಾದರೆ ಶಾಲೆಯ ಮುಖ್ಯ ಗುರುಗಳು ಅಥವಾ ಬಿಇಓ ಗಳ ಮುಖಾಂತರ ನನಗೆ ಅಥವಾ ಡಿಪೋ ಮುಖ್ಯಸ್ಥರ ಗಮನಕ್ಕೆ ತನ್ನಿ ಎಂದು ತಿಳಿಸಿದರು.

ಗ್ರಾಮೀಣ ಭಾಗದ ಅನೇಕ ಕಡೆಗಳಲ್ಲಿ ಬಸ್ ನಿಲ್ದಾಣವಿಲ್ಲ. ಹೀಗಾಗಿ ಬಸ್ ನಿಲ್ದಾಣವಿಲ್ಲದ ಭಾಗದಲ್ಲಿ ಸರ್ಕಾರದ ಜಾಗವಿದ್ದರೆ ಶಾಸಕರ ಹಾಗೂ ಸಂಸದರ ಅನುದಾನದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡಲು ಗಮನಹರಿಸಲಾಗುವುದು. ಮುಂದಿನ ದಿನಗಳಲ್ಲಿ ನಗರದಲ್ಲಿ ಎಲೆಕ್ಟ್ರಿಕಲ್ ಬಸ್‌ಗಳ ಸಂಚಾರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.

## ಕುರುಬ ಸಮಾವೇಶಕ್ಕೆ ಹೊನ್ನಾಳಿ ತಾ.ನಿಂದ 10 ಸಾವಿರಕ್ಕೂ ಹೆಚ್ಚು ಜನ

ಹೊನ್ನಾಳಿ, ಫೆ.5- ಕುರುಬ ಸಮಾಜದ ಮೀಸಲಾತಿ ಹೋರಾಟವನ್ನು ಬೆಂಬಲಿಸಿ ಬೆಂಗಳೂರಿನ ಸಮಾವೇಶಕ್ಕೆ ತಾಲ್ಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಕುರುಬ ಸಮಾಜದವರು ಭಾಗವಹಿಸುತ್ತಿರುವುದಾಗಿ ಸಮಾಜದ ತಾಲ್ಲೂಕು ಕಾರ್ಯದರ್ಶಿ ಕುಬೇರಪ್ಪ ಹೇಳಿದರು.

ಪ್ರವಾಸಿ ಮಂದಿರದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಶ್ರೀಗಳ ಕರೆಯ ಮೇರೆಗೆ ತಾಲ್ಲೂಕಿನ ಹತ್ತು ಸಾವಿರಕ್ಕೂ ಹೆಚ್ಚು ಜನರು ಸ್ವಯಂ ಪ್ರೇರಣೆಯಿಂದ ಭಾಗವಹಿಸಲಿದ್ದಾರೆ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಹೆಚ್.ಬಿ. ಮಂಜಪ್ಪ, ರಮೇಶ್, ಚನ್ನಪ್ಪ, ವಿಜೇಂದ್ರ, ಮಹೇಶ್, ಬೀರಪ್ಪ, ಆನಂದ್ ರಾಜು, ರಂಜಿತ್ ಇನ್ನಿತರರಿದ್ದರು.

## ಜಿಲ್ಲಾದ್ಯಂತ ಇಂದು 50 ಕಡೆ ರಸ್ತೆ ತಡೆ

ಕೇಂದ್ರ ಸರ್ಕಾರದ ಹೊಸ ಕೃಷಿ ಕಾಯಿದೆಗಳ ತಿದ್ದುಪಡಿ ವಿರೋಧಿಸಿ ಮತ್ತು ಕನಿಷ್ಟ ಬೆಂಬಲ ಬೆಲೆಗೆ ಕಾನೂನು ಜಾರಿಗೆ ಆಗ್ರಹಿಸಿ ನಡೆಯುತ್ತಿರುವ ದೆಹಲಿಯಲ್ಲಿನ ರೈತರ ಹೋರಾಟ ಬೆಂಬಲಿಸಿ ಇಂದು ಜಿಲ್ಲಾದ್ಯಂತ 50 ಕಡೆಗಳಲ್ಲಿ ರಸ್ತೆ ತಡೆ ಚಳುವಳಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘ, ಹಸಿರುಸೇನೆ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ತಿಳಿಸಿದ್ದಾರೆ.

ಬೆಳಿಗೆ 9 ರಿಂದ ಮಧ್ಯಾಹ್ನ 3ರವರೆಗೆ ಜಿಲ್ಲೆಯ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಮುಖ್ಯ ರಸ್ತೆಗಳನ್ನು ಬಂದ್ ಮಾಡಲಾಗುವುದು. ರೈತರ ಈ ಬೃಹತ್ ಹೋರಾಟಕ್ಕೆ ಎಲ್ಲ ರೈತ ಬಾಂಧವರು, ರೈತಪರ ಹೋರಾಟ ಬೆಂಬಲಿಸುವವರು, ಖಾಸಗಿ ಬಸ್, ಟ್ರ್ಯಾಕ್ಟರ್, ಕಾರು ಮತ್ತು ಇತರೆ ವಾಹನಗಳ ಮಾಲೀಕರು ಬೆಂಬಲಿಸುವಂತೆ ಹುಚ್ಚವ್ವನಹಳ್ಳಿ ಮಂಜುನಾಥ್, ಪ್ರಕಾಶ್, ಗುಮ್ಮನೂರು ಬಸವರಾಜ್, ಕೆಂಚಮ್ಮನಹಳ್ಳಿ ಹನುಮಂತ, ಚಿರಂಜೀವಿ, ಗೌಡಗನಹಳ್ಳಿ ಸತೀಶ್, ಎಲ್ಲೋದಹಳ್ಳಿ ರವಿ ಮನವಿ ಮಾಡಿದ್ದಾರೆ.

## ವಾಲ್ಮೀಕಿ ಜಾತ್ರೆ ನಿಮಿತ್ತ ಬೈಕ್ ರ್‍ಯಾಲಿ



ಮಲೇಬೆನ್ನೂರು, ಫೆ.5- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8 ಮತ್ತು 9 ರಂದು ಜರುಗಲಿರುವ 3ನೇ ವರ್ಷದ ವಾಲ್ಮೀಕಿ ಜಾತ್ರೆ ಅಂಗವಾಗಿ ಮಲೇಬೆನ್ನೂರಿನಿಂದ ಹರಿಹರ ಮಾರ್ಗವಾಗಿ ರಾಜನಹಳ್ಳಿ ಮಠದವರೆಗೆ ಬೈಕ್ ರ್‍ಯಾಲಿಯನ್ನು ನಿನ್ನೆ ನಡೆಸಲಾಯಿತು.

ಮಲೇಬೆನ್ನೂರಿನ ನೀರಾವರಿ ಇಲಾಖೆಯಿಂದ ಪ್ರಾರಂಭವಾದ ಬೈಕ್ ರ್‍ಯಾಲಿ ಹರಿಹರ ನಗರದ ಮೂಲಕ ರಾಜನಹಳ್ಳಿ ಮಠ ತಲುಪಿತು. ವಾಲ್ಮೀಕಿ ಭಾವಚಿತ್ರ, ಬಾವುಟಗಳು ಬೈಕ್ ರ್‍ಯಾಲಿಯಲ್ಲಿ ರಾರಾಜಿಸಿದವು.

**ಕ್ರಿಕೆಟ್ :** ವಾಲ್ಮೀಕಿ ಜಾತ್ರೆ ಅಂಗವಾಗಿ ಹರಿಹರ ಗಾಂಧಿ ಮೈದಾನದಲ್ಲಿ ಇಂದಿನಿಂದ ಮೂರು ದಿನಗಳ ಕಾಲ ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿ ಹಮ್ಮಿಕೊಳ್ಳಲಾಗಿದೆ.

**ದಿನದ ಚುಟುಕು**

ನನ್ನ ಜ್ಞಾನ ಮಟ್ಟಕ್ಕೆ ನನ್ನ ಬರಹ
ಓದುವವರಿಗದು ನಾನಾ ತರಹ
ಭಾವದಲ್ಲಡಗಿದ ಅಕ್ಷರದ ಪದಗುಚ್ಛ
ಹೊರ ಬರುವುದದು ದೇವಿಯ ಇಚ್ಛಾ.

- ವೀಕೆಎಂ

# ಒತ್ತಡ ಮುಕ್ತರಾಗಿ ಪುನಶ್ಚೇತನಗೊಳ್ಳಲು ಕ್ರೀಡಾಕೂಟ ಸಹಕಾರಿ

## ಜಿಲ್ಲಾ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ



ದಾವಣಗೆರೆ, ಫೆ.5- ನಿತ್ಯದ ಕರ್ತವ್ಯದ ಒತ್ತಡದಿಂದ ಮುಕ್ತರಾಗಿ, ತಮ್ಮನ್ನು ತಾವು ಪುನಶ್ಚೇತನ ಗೊಳಿಸಿಕೊಳ್ಳಲು ಕ್ರೀಡಾಕೂಟಗಳು ಸಹಕಾರಿ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರಿಡಾ ಇಲಾಖೆ, ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಶುಕ್ರವಾರ ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡೆಗಳಲ್ಲಿ ಗೆಲ್ಲುವುದು ಮುಖ್ಯವಲ್ಲ. ಭಾಗವಹಿಸಿ ಖುಷಿಯಿಂದ ಆಟವಾಡುವುದು ಮುಖ್ಯ. ಎಲ್ಲರೂ ಕ್ರೀಡಾ ಮನೋಭಾವದಿಂದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಬೇಕು. ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಹುರುಪಿನಿಂದ ಪಾಲ್ಗೊಂಡು ತಮ್ಮ ಇಲಾಖೆಗಳಿಗೆ ಹೆಸರು ತರುವಂತೆ ಹಾರೈಸಿದರು.

ಕ್ರೀಡಾ ಧ್ವಜಾರೋಹಣ ನೆರವೇರಿಸಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಕೆ.ವಿ.ಶಾಂತಕುಮಾರಿ, ಇತ್ತೀಚಿನ ದಿನಗಳಲ್ಲಿ ಮಕ್ಕಳು ಕ್ರೀಡೆ ಎಂದರೇನು? ಎಂದು ಪ್ರಶ್ನಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸದಾ ಓದು, ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಲೀನವಾಗುವ ಮಕ್ಕಳಿಗೆ, ಪೋಷಕರು ಕ್ರೀಡಾಕೂಟದಲ್ಲಿ ಪಾಲ್ಗೊಂಡು ಪ್ರೇರಣೆಯಾಗಬೇಕು ಎಂದು ಸಲಹೆ ನೀಡಿದರು.

ಮಹಾನಗರ ಪಾಲಿಕೆ ಮೇಯರ್ ಬಿ.ಜಿ. ಅಜಯಕುಮಾರ್ ಮಾತನಾಡಿ, ಕಾರ್ಯಾಂಗ ಉತ್ತಮವಾಗಿದ್ದರೆ, ಆಡಳಿತ ಸುಗಮವಾಗಿ ನಡೆಯುತ್ತದೆ. ಕಾರ್ಯಾಂಗವನ್ನು ಪ್ರತಿನಿಧಿಸುವ ಸರ್ಕಾರಿ ನೌಕರರು ಚಟುವಟಿಕೆಯಿಂದ ಇದ್ದರೆ ಒಂದೆರಡು ತಾಸು ಹೆಚ್ಚು ಕೆಲಸ ಮಾಡುತ್ತಾರೆ. ಈ ನಿಟ್ಟಿನಲ್ಲಿ ಇಂತಹ ಕ್ರೀಡಾಕೂಟಗಳು ಅವಶ್ಯಕ. ಸಾವಿರಕ್ಕೂ ಮೀರಿ ನೌಕರರು ಇಂದಿನ ಕ್ರೀಡೆಯಲ್ಲಿ ಭಾಗವಹಿಸಲು ಹೆಸರು ನೋಂದಾಯಿಸಿರುವುದು ಉತ್ತಮ ಬೆಳವಣಿಗೆ ಎಂದರು.

ತಹಶೀಲ್ದಾರ್ ಬಿ.ಎನ್.ಗಿರೀಶ್ ಮಾತನಾಡಿ, ಕ್ರೀಡಾಂಗಣದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ನೌಕರರು, ಸಿಬ್ಬಂದಿಗಳು ಇಲ್ಲಿ ಪಾಲ್ಗೊಂಡಿರುವುದರಿಂದ ಹಬ್ಬದ ವಾತಾವರಣ ನಿರ್ಮಾಣವಾಗಿದೆ ಎಂದರು.

ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಾಲಾಕ್ಷಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೊರೊನಾ ಸಂದರ್ಭದಲ್ಲೂ ಒತ್ತಡದಿಂದ ಕರ್ತವ್ಯ ನಿರ್ವಹಿಸಿದ್ದ ಸರ್ಕಾರಿ ನೌಕರರಿಗೆ ಈ ಕ್ರೀಡಾಕೂಟ ಶಕ್ತಿವರ್ಧಕವಿದ್ದಂತೆ ಎಂದರು.

ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರಾದ ಸಾಕಮ್ಮ ಗಂಗಾಧರನಾಯ್ಕ ಹಾಗೂ ಇತರರು ಉಪಸ್ಥಿತರಿದ್ದರು. ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಶ್ರೀನಿವಾಸ್ ಸ್ವಾಗತಿಸಿದರು.

ಸರ್ಕಾರಿ ನೌಕರರ ಸಂಘದ ಸಾಂಸ್ಕೃತಿಕ ಕಾರ್ಯದರ್ಶಿ ಕೆ.ಆರ್. ಮಲ್ಲಿಕಾರ್ಜುನಯ್ಯ, ಕ್ರೀಡಾ ಕಾರ್ಯದರ್ಶಿ ಗುರುಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯದರ್ಶಿ ಟಿ. ಪ್ರಕಾಶ್ ಪ್ರಾರ್ಥಿಸಿದರು. ಖಜಾಂಚಿ ಎಸ್.ಕಲ್ಲೇಶಪ್ಪ ವಂದಿಸಿದರು.

# ಮೋದಿ, ಜನತೆ ಬೆಂಬಲ ಇರುವವರೆಗೆ ನಾನೇ ಮುಖ್ಯಮಂತ್ರಿ

ಬೆಂಗಳೂರು, ಫೆ.5 - ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ರಾಜ್ಯದ ಜನತೆ ಬೆಂಬಲ ಇರುವವರೆಗೆ ನನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಅಲುಗಾಡಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿಧಾನಸಭೆಯಲ್ಲೇ ಗುಡುಗಿದ್ದಾರೆ.

ನನ್ನ ವಿರುದ್ಧ ನೂರು ಪ್ರಕರಣಗಳು ದಾಖಲಿಸಿದರೂ ಅವುಗಳನ್ನು ಎದುರಿಸುವ ಧೈರ್ಯ ಮತ್ತು ಸ್ಥೈರ್ಯ ಎರಡೂ ಇದೆ, ಇಂತಹ ಎಲ್ಲಾ ಮೊಕದ್ದಮೆಗಳನ್ನು ಗೆದ್ದು ಕಳಂಕರಹಿತನಾಗಿ ಹೊರಬರುತ್ತೇನೆ ಎಂದವರು ಹೇಳಿದ್ದಾರೆ.

ಹಾದಿಬೀದಿಯಲ್ಲಿ ಹೋಗುವವರೆಲ್ಲಾ ಆರ್.ಟಿ.ಐ.ನಲ್ಲಿ ಅರ್ಜಿ ಹಾಕಿ ಕೆಲವು ಕಾಗದ ಪತ್ರಗಳನ್ನು ಪಡೆದು ಅನವಶ್ಯಕವಾಗಿ ನ್ಯಾಯಾಲಯದಲ್ಲಿ ದಾವೆ ಹೂಡುತ್ತಿದ್ದಾರೆ. ಇಂತಹ ಗೊಡ್ಡು ಬೆದರಿಕೆಗಳಿಗೆ ನಾನು ಬಗ್ಗುವವನಲ್ಲ, ಪಕ್ಷದ ವರಿಷ್ಠರ ಆಶೀರ್ವಾದ ಇರುವವರೆಗೂ ಅಧಿಕಾರದಲ್ಲಿ ಇರುತ್ತೇನೆ ಎಂದವರು ಹೇಳಿದ್ದಾರೆ.



ಪ್ರಸಕ್ತ ಅಧಿಕಾರವಧಿಯನ್ನು ಪೂರ್ಣಗೊಳಿಸುವುದಲ್ಲದೆ, ಮುಂದೆ 2023ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 150 ಸ್ಥಾನಗಳಲ್ಲಿ ಗೆದ್ದು ಮತ್ತೆ ಅಧಿಕಾರ ಹಿಡಿಯಲಿದೆ ಎಂದು ತುಂಬು ವಿಶ್ವಾಸದಿಂದ ತಿಳಿಸಿದ್ದಾರೆ.

ನಿಮಗೆ (ಸಿದ್ದರಾಮಯ್ಯ), ಕಾಂಗ್ರೆಸ್‌ಗೆ ಇನ್ನು ಮುಂದೆ ಪ್ರತಿಪಕ್ಷವೇ ಗಟ್ಟಿ ಸ್ಥಾನ, ನಿಮ್ಮ ನಾಯಕತ್ವದಲ್ಲಿ ಕಳೆದ ವಿಧಾನಸಭಾ ಚುನಾವಣೆಯನ್ನು ಸೋತಿರಿ, ಅಲ್ಲದೆ, ಕಳೆದ ಲೋಕಸಭೆ ನಂತರ ವಿಧಾನಸಭಾ ಉಪಚುನಾವಣೆಗಳಲ್ಲೂ ಹೀನಾಯ ಸೋಲು ಕಂಡಿದ್ದೀರಿ. ಇದು ಇಲ್ಲಿಗೇ ನಿಲ್ಲುವುದಿಲ್ಲ, ಮುಂದೆ ಒಂದು ಲೋಕಸಭಾ ಹಾಗೂ ಮೂರು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಅಲ್ಲಿಯೂ ನಾವು ಬಹಳ ಅಂತರದಿಂದ ಜಯ **(4ನೇ ಪುಟಕ್ಕೆ)**

### ಆಪರೇಷನ್ ಜನಕ ಸಿದ್ದರಾಮಯ್ಯ : ಸಿಎಂ

ಬೆಂಗಳೂರು, ಫೆ.5- ಆಪರೇಷನ್ ಕಮಲದ ಜನಕ ನಾನಲ್ಲ, ಇದರ ಪಿತಾಮಹಾ ನೀವೇ ಎಂದು ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ವಿಧಾನಸಭೆಯಲ್ಲಿಂದು ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರ ನೀಡುವ ಸಂದರ್ಭದಲ್ಲಿ ಮಾತನಾಡಿದ ಅವರು, ನಿಮ್ಮ ಭಾಷಣದಲ್ಲಿ ಏನು ಹೇಳಬೇಕೋ ಅದನ್ನು ಬಿಟ್ಟು ಬೇರೆಲ್ಲವನ್ನೂ ಹೇಳಿದ್ದೀರಿ. ಪದೇ ಪದೇ ಆಪರೇಷನ್ ಕಮಲ ಮಾಡಿ ಅಧಿಕಾರಕ್ಕೆ ಬಂದೇ ಎನ್ನುತ್ತೀರಿ, ನೀವು 2006ರಲ್ಲಿ ಮಾಡಿದ್ದಾದರೂ ಏನು? ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು.

ಚಾಮುಂಡೇಶ್ವರಿ ಕ್ಷೇತ್ರಕ್ಕೆ ಅಂದು ರಾಜೀನಾಮೆ ನೀಡಿ, ಮತ್ತೆ ಚುನಾವಣೆ ಎದುರಿಸಿದಿರಿ, ಅದು ಯಾವ ಆಪರೇಷನ್ ಎಂದು ಹೀಯಾಳಿಸಿದರು. ಇದರ ಜನಕ ನಾನಲ್ಲ, ಸಿದ್ದರಾಮಯ್ಯನವರೇ, ಅದು ನೀವೇ. ಮತ್ತೆ ಈ ಪದ ಬಳಸಬೇಡಿ, 2018ರ ಚುನಾವಣೆಯಲ್ಲಿ ರಾಜ್ಯದ ಜನತೆ ನಮಗೆ 104 ಸ್ಥಾನ ನೀಡಿದರು, ಅಧಿಕಾರದಲ್ಲಿದ್ದ ನೀವು 133ರಿಂದ 78ಕ್ಕೆ ಇಳಿದಿರಿ.

ಜನ ನಮಗೆ ಆಶೀರ್ವಾದ ಮಾಡಿದರು, ಆದರೆ ನೀವು, ನಮಗೆ ಅಧಿಕಾರ ತಪ್ಪಿಸಲು ನಿಮ್ಮ ವೈರಿ (ದೇವೇಗೌಡರ) ಮನೆಯ ಬಾಗಿಲಿಗೆ ಹೋದಿರಿ.

ನೀವು ಎಂತಹ ಸರ್ಕಾರ ಮಾಡಿದಿರಿ, ನಿಮಗೆ ಆಶೀರ್ವಾದ ಇತ್ತಾ ಎಂದು ಹಳೆಯದೆಲ್ಲವನ್ನೂ ಕೆದಕಿ ಸಿದ್ದರಾಮಯ್ಯ ಅವರನ್ನು ತರಾಟೆಗೆ ತೆಗೆದುಕೊಂಡರು.

## ದೇವೇಗೌಡ, ಡಿಕೆಶಿ ಕ್ಷೇತ್ರಗಳಿಗೆ ಯಡಿಯೂರಪ್ಪ ಕೊಡುಗೆ

ಬೆಂಗಳೂರು, ಫೆ.5 - ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿನಿಧಿಸುವ ಕ್ಷೇತ್ರಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಂಪರ್ ಕೊಡುಗೆ ನೀಡಿದ್ದಾರೆ.

ಹಾಸನದಲ್ಲಿ ಸ್ಥಗಿತಗೊಂಡಿರುವ ವಿಮಾನ ನಿಲ್ದಾಣ ಕಾಮಗಾರಿಗೆ ಚಾಲನೆ ಹಾಗೂ ಕನಕಪುರಕ್ಕೆ ವೈದ್ಯಕೀಯ ಕಾಲೇಜು ಮಂಜೂರು ಮಾಡುವುದಾಗಿ ವಿಧಾನಸಭೆಯಲ್ಲಿಂದು ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಸುದೀರ್ಘ ಉತ್ತರ ನೀಡಿದ ಅವರು, ಕಾರಣಾಂತರಗಳಿಂದ ಹಾಸನದಲ್ಲಿ ವಿಮಾನ ನಿಲ್ದಾಣ ಕಾಮಗಾರಿ ಸ್ಥಗಿತಗೊಂಡಿತ್ತು, ಮಾಜಿ ಪ್ರಧಾನಿ ದೇವೇಗೌಡ ಅವರು, ಯಡಿಯೂರಪ್ಪ ಅಧಿಕಾರವಧಿಯಲ್ಲಿಯೇ ವಿಮಾನ ನಿಲ್ದಾಣ ಉದ್ಘಾಟನೆ ಮಾಡುವಂತೆ ತಿಳಿಸಿದ್ದಾರೆ, ಆದ್ದರಿಂದ ಸ್ಥಗಿತಗೊಂಡಿರುವ ಕಾಮಗಾರಿಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದರು.

ಡಿ.ಕೆ.ಶಿವಕುಮಾರ್ ತಮ್ಮನ್ನು ಭೇಟಿಯಾಗಿ ಕನಕಪುರಕ್ಕೆ ವೈದ್ಯಕೀಯ ಕಾಲೇಜು ನಿರ್ಮಾಣ ಮಾಡಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಅಲ್ಲಿಗೂ ಸಹ ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಲಾಗುವುದು, ಯಾರಿಗೂ ತಾರತಮ್ಯ ಮಾಡುವುದಿಲ್ಲ ಎಂದು ಭರವಸೆ ನೀಡಿದರು.

## ನಗರ ಪ್ರದೇಶಗಳಲ್ಲಿ 2 ಸಾವಿರ ಹೆಚ್ಚುವರಿ ಅಂಗನವಾಡಿಗೆ ಪ್ರಸ್ತಾವನೆ

ಬೆಂಗಳೂರು, ಫೆ.5- ನಗರ ಪ್ರದೇಶಗಳಲ್ಲಿ ಹೆಚ್ಚುವರಿಯಾಗಿ 2000 ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ಅವಧಿಯಲ್ಲಿ ಸದಸ್ಯ ಯು.ಬಿ.ವೆಂಕಟೇಶ್ ವಿಷಯ ಪ್ರಸ್ತಾಪಿಸಿ, ಬೆಂಗಳೂರಿನಲ್ಲಿ 4.44 ಲಕ್ಷ ಹೆಣ್ಣು ಮಕ್ಕಳು, 4 .72 ಲಕ್ಷ ಗಂಡು ಮಕ್ಕಳು ಸೇರಿ 9.16 ಲಕ್ಷ ಮಕ್ಕಳಿದ್ದಾರೆ, ಮುಂದಿನ ದಿನಗಳಲ್ಲಿ ಇದು 10 ಲಕ್ಷಕ್ಕೆ ಏರಲಿದೆ, ಈಗಿರುವ ಅಂಗನವಾಡಿಗಳ ಸಂಖ್ಯೆ ಮಕ್ಕಳಿಗೆ ಅನುಗುಣವಾಗಿ ಇಲ್ಲ ಎಂದರು.

ಅಂಗನವಾಡಿ ಸಂಖ್ಯೆಗಳನ್ನು ಹೆಚ್ಚಿಸಿ, ಉತ್ತಮ ಸೌಲಭ್ಯ ಕೊಟ್ಟು ಮೇಲ್ದರ್ಜೆಗೇರಿಸಿ, ಬೆಂಗಳೂರಿನಲ್ಲಿ ಕೆಲಸ ಮಾಡುವ ಅಂಗನವಾಡಿ ನೌಕರರು ಮತ್ತು ಸಹಾಯಕಿಯರಿಗೆ ಗೌರವ ಧನ ಹೆಚ್ಚಳ ಮಾಡಿ ಎಂದು ಸಲಹೆ ನೀಡಿದರು.

ಉತ್ತರ ನೀಡಿದ ಸಚಿವೆ ಶಶಿಕಲಾ, ರಾಜ್ಯದಲ್ಲಿ 2420 ಅಂಗನವಾಡಿಗಳಿವೆ, 55 ಅಂಗನವಾಡಿ ಕಾರ್ಯಕರ್ತೆಯರು, 209 ಸಹಾಯಕಿಯರ ಹುದ್ದೆಗಳು ಖಾಲಿ ಇವೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನೇಮಕಾತಿ ನಡೆಯುತ್ತಿದೆ. ಅಂಗನವಾಡಿ ಸೌಲಭ್ಯವನ್ನು ಉನ್ನತೀಕರಿಸಲು ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ನಿಧಿ ಬಳಕೆ ಮಾಡಲಾಗುತ್ತಿದೆ ಎಂದರು.

# ದುಶ್ಚಟಗಳಿಗೆ ದಾಸರಾಗದಿದ್ದರೆ ಕ್ಯಾನ್ಸರ್ ರೋಗ ತಡೆಗಟ್ಟಲು ಸಾಧ್ಯ

## ಹರಪನಹಳ್ಳಿಯಲ್ಲಿ ಬೈಕ್ ರ್‍ಯಾಲಿ ಮೂಲಕ ಕ್ಯಾನ್ಸರ್ ಜಾಗೃತಿ



ಹರಪನಹಳ್ಳಿ, ಫೆ.5- ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಕೆಪಿಎಂಇಎ, ಐಎಂಎ, ಐಡಿಎ, ಆಯುಷ್ ಮತ್ತು ಸರ್ಕಾರಿ ವೈದ್ಯರ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಎಲ್ಲಾ ಖಾಸಗಿ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರು ಸೇರಿ ಬೈಕ್ ರ್‍ಯಾಲಿ ಮೂಲಕ ಕ್ಯಾನ್ಸರ್ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ನಡೆಸಲಾಯಿತು.

ಉಪವಿಭಾಗಾಧಿಕಾರಿ ವಿ.ಕೆ. ಪ್ರಸನ್ನ ಕುಮಾರ್ ರ್‍ಯಾಲಿಗೆ ಚಾಲನೆ ನೀಡಿ ಮಾತನಾಡಿ, ದುಶ್ಚಟಗಳಿಗೆ ದಾಸರಾಗದಿದ್ದರೆ ಕ್ಯಾನ್ಸರ್ ರೋಗ ತಡೆಗಟ್ಟಲು ಸಾಧ್ಯ. ರೋಗ ಲಕ್ಷಣಗಳು ಗೋಚರಿಸಿದ ಕೂಡಲೇ ಚಿಕಿತ್ಸೆ ಪಡೆದರೆ ಗುಣಮುಖರಾಗಲು ಹೆಚ್ಚು ಅವಕಾಶಗಳಿರುತ್ತವೆ. ಆದಷ್ಟು ತಂಬಾಕು ರಹಿತ ಜೀವನ ನಡೆಸಿ ಎಂದು ಕಿವಿಮಾತು ಹೇಳಿದರು.

ಐಎಂಎ ಅಧ್ಯಕ್ಷ ಡಾ. ಮಹೇಶ್ ಮಾತನಾಡಿ, ಖಾಸಗಿ ಹಾಗೂ ಸರ್ಕಾರಿ ವೈದ್ಯರ ಸಮೂಹ ಒಟ್ಟಾಗಿ ಕ್ಯಾನ್ಸರ್ ರೋಗದ ವಿರುದ್ಧ ತಾಲ್ಲೂಕಿನಲ್ಲಿ ಸಮರ ಸಾರಿರುವುದು ಸ್ವಾಗತಾರ್ಹ ಎಂದರು. ಸಾರ್ವಜನಿಕ ಆಸ್ಪತ್ರೆ ವೈದ್ಯಾಧಿಕಾರಿ ಶಿವಕುಮಾರ್, ಶಿವಕೃಪ ಆಸ್ಪತ್ರೆಯ ಡಾ. ಹರ್ಷ ಮಾತನಾಡಿದರು.

ತಾಲ್ಲೂಕು ವೈದ್ಯಾಧಿಕಾರಿ ಡಾ. ವೆಂಕಟೇಶ್, ಡಾ. ಪಿ. ಅನಂತಶೆಟ್ಟಿ, ಡಾ. ಎಸ್.ಎಂ. ಖಾನ್, ಡಾ. ಮಂಜುನಾಥ್, ಡಾ. ತಿಪ್ಪೇಸ್ವಾಮಿ, ಡಾ. ಶೇಖ್‌ನಫ್ತಿಯಾರ್, ಡಾ. ಕೊಟ್ರೇಶ್, ಡಾ. ಕಿಶನ್ ಭಾಗವತ್, ಡಾ. ಸಂಗೀತಾ, ಡಾ. ತ್ರಿವೇಣಿ, ಡಾ. ಜಯಶ್ರೀ, ಡಾ. ಅಂಬಿಕಾ, ಡಾ. ಸೀಮಾ ಅಧಿಕಾರ, ಡಾ. ಪ್ರಿಯಾಂಕಾ ಅಧಿಕಾರ, ಡಾ. ವಿಶ್ವಾರಾಧ್ಯ, ಡಾ. ಪ್ರಶಾಂತ ಬಡ್ಡನವರ್ ಹಾಗೂ ಇತರರು ಭಾಗವಹಿಸಿದ್ದರು.

## ಸಮೂಹ ನೃತ್ಯ-ಗಾಯನ

ದಾವಣಗೆರೆ, ಫೆ.5- ಜಿಲ್ಲೆ ಸಮಾಚಾರ ಬಳಗದಿಂದ ಸಾರ್ವಜನಿಕವಾಗಿ ಹಿರಿಯರು ಮತ್ತು ಕಿರಿಯರಿಗೆ ಉಚಿತವಾಗಿ ಸಮೂಹ ಗೀತೆ, ಸಮೂಹ ನೃತ್ಯ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಸಂಸ್ಥಾಪಕ ವಿ. ಹನುಮಂತಪ್ಪ ತಿಳಿಸಿದ್ದಾರೆ. ಆಸಕ್ತರು ವಾಟ್ಸಪ್ ನಂ: 9740112249, 990395797 ಹೆಸರು ನೋಂದಾಯಿಸುವುದು. ವಿವರಕ್ಕೆ ಮೊಬೈಲ್ 95387 32777ಕ್ಕೆ ಸಂಪರ್ಕಿಸಲು ಬಳಗದ ಪ್ರಧಾನ ಕಾರ್ಯದರ್ಶಿ ಸಿ.ಕೆ. ಆನಂದತೀರ್ಥಾಚಾರ್, ಸಂ ಚಾಲಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

## ಹರಿಹರ : ನಾಳೆ ಪದಗಳ ಸ್ಪರ್ಧೆ

ಹರಿಹರ, ಫೆ.5- ಪುರಂದರ ದಾಸರ ಆರಾಧನೆ ಪ್ರಯುಕ್ತ ನಾಡಿದ್ದು ದಿನಾಂಕ 7 ರ ಭಾನುವಾರ ದಾಸರ ಪದಗಳ ಸ್ಪರ್ಧೆ ನಡೆಯಲಿದೆ. ಆಸಕ್ತರು ಶ್ರೀ ಚೈತನ್ಯ ಸಂಗೀತ ಮತ್ತು ನೃತ್ಯ ಕಲಾ ಕೇಂದ್ರ (96632 42243, 8073181096) ವನ್ನು ಸಂಪರ್ಕಿಸಬಹುದು.


# ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀಮತಿ ಪ್ರೇಮಮ್ಮ ಯಾನೆ ಪ್ರೇಮಲೀಲಾ ಕೋಂ ಎ.ಎಸ್.ಶಂಭುಲಿಂಗಪ್ಪ** ವಯಸ್ಸು 57 ವರ್ಷ, ಕೋಗುಂಡೆ, ಚಿತ್ರದುರ್ಗ ತಾ & ಜಿಲ್ಲೆ ಇವರ ಪರವಾಗಿ ನೀಡುವ ಸಾರ್ವಜನಿಕ ಪ್ರಕಟಣೆ ಏನೆಂದರೆ:-
ದಾವಣಗೆರೆ ತಾ: ಕಸಬಾ ಹೋಬಳಿ, ಶಾಬನೂರು ಗ್ರಾಮದ ರಿ.ಸ.ನಂ.205/1ಪಿರಲ್ಲಿ 02 ಎಕರೆ ಜಮೀನು **ದಿವಂಗತ ನಾರಪ್ಪ ಟಿ. ಯಾನೆ ದೊಡ್ಡನಾರಪ್ಪ ಬಿನ್ ಲೇಟ್ ಹನುಮಪ್ಪ, ಸೋಮಶೇಖರಯ್ಯ, ಮುನಿಯಪ್ಪ,** ಸೇರಿ ಜಂಟಿಯಾಗಿದ್ದ ಜಮೀನಿನಲ್ಲಿ 06 ಎಕರೆ 37 ಗುಂಟೆ ಪೈಕಿ ಇದರಲ್ಲಿ 02 ಎಕರೆ ವಿಭಾಗ ಮೂಲಕ 2697 ಖಾತೆ ನಂ.201 ಎಂದು **ಟಿ.ದೊಡ್ಡನಾರಪ್ಪ** ಹೆಸರಿಗೆ ಪಹಣಿ ಇರುತ್ತದೆ. ಈ ಜಮೀನಿನಲ್ಲಿ ದಿ|| ಸಣ್ಣ ನಾರಪ್ಪ ಬಿನ್ ಲೇಟ್ ಬಸಪ್ಪ ಇವರು 01 ಎಕರೆ ಜಮೀನನ್ನು ನನ್ನ ತಂದೆಯಿಂದ **ಎಂ.ಆರ್. 30/1980-81** ರ ಸಾಲಿನಲ್ಲಿ ಹಕ್ಕು ಬದಲಾವಣೆ ಮೂಲಕ ತಮ್ಮಗಳ ಒಪ್ಪಿಗೆ ಸಹಿ ಪಡೆಯದೇ ತಮ್ಮ ಹೆಸರಿಗೆ ಖಾತೆ, ಪಹಣಿ, ಮ್ಯುಟೇಷನ್‌ನಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ **ಎಂ.ಆರ್. ನಂ 148/88-89** ಸುಳ್ಳು ಸಹಿ ಮಾಡಿಕೊಂಡು ಉಳಿದ ಜಮೀನನ್ನು ತಮ್ಮ ಮಕ್ಕಳ ಹೆಸರಿಗೆ ವರ್ಗಾಯಿಸಿಕೊಂಡಿರುತ್ತಾರೆ. ಈ ವಿಷಯ ಇತ್ತೀಚಿಗೆ ಗೊತ್ತಾಗಿ ಮುಟೇಷನ್ ನೋಡಿ ದಿ|| ಸಣ್ಣನಾರಪ್ಪ ಸಲ್ಲಿಸಿರುವ ಅರ್ಜಿಯ ಪ್ರಕಾರ **ದಿ|| ಸಣ್ಣನಾರಪ್ಪ ಬಿನ್ ಲೇಟ್ ಬಸಪ್ಪ ನಮ್ಮ ಚಿಕ್ಕಪ್ಪನೇ ಅಲ್ಲ** ಎಂಬುದು ಗೊತ್ತಾಗಿರುತ್ತದೆ. **1980-81** ರಿಂದ ಇಲ್ಲಿಯವರೆಗೂ ನಮ್ಮ ಚಿಕ್ಕಪ್ಪನೆಂದು ನಂಬಿಕೊಂಡು ಬಂದಿರುತ್ತೇವೆ. ಈಗ ನಮ್ಮ ತಂದೆ ಆಸ್ತಿಯಲ್ಲಿ ಪಾಲು ಪಡೆದು ಮೋಸ ಮಾಡಿರುವ ಸಂಗತಿ ಗೊತ್ತಾಗಿ **ದಿ|| ಸಣ್ಣನಾರಪ್ಪ** ನವರ ಮಕ್ಕಳಾದ **ಲೇಟ್ ಟಿ.ನಾಗರಾಜಪ್ಪ** ಇವರು ಮೃತರಾದ ನಂತರ ತಮ್ಮ ಮಕ್ಕಳಾದ **ಶ್ರೀಮತಿ ವೀಣಾ ಟಿ.ಎನ್ ಮತ್ತು ನಿರಂಜನ್ ಟಿ.ಎನ್.** ಇವರು ತಮ್ಮ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿ ನಿವೇಶನಗಳನ್ನಾಗಿ ಪರಿವರ್ತಿಸಿ, ಮಾರಾಟ ಮಾಡಲು ಇವರುಗಳು ಮೇಲ್ಕಂಡ ಸ್ವತ್ತಿಗೆ ಸಂಬಂಧಿಸಿದಂತೆ, ನನ್ನ ಕಕ್ಷಿದಾರರ ಹಕ್ಕು ಮತ್ತು ಹಿತಾಸಕ್ತಿಗೆ ಮೋಸ ಮಾಡುವ ಉದ್ದೇಶದಿಂದ ಮೇಲ್ಕಂಡ ಸರ್ವೆ ನಂಬರಿಗೆ ಜಮೀನಿನಲ್ಲಿ ತಮಗೆ ತಿಳಿದಂತೆ ಪರಿವರ್ತನೆ ಮಾಡಿಕೊಂಡು ವ್ಯವಹಾರ ಮಾಡುವ ಹುನ್ನಾರ ತಿಳಿದು ಬಂದಿರುತ್ತದೆ. ನನ್ನ ಕಕ್ಷಿದಾರರಿಗೆ ಮೇಲ್ಕಂಡ ಸ್ವತ್ತಿನಲ್ಲಿ ಹಕ್ಕು ಹಿತಾಸಕ್ತಿ ಇರುತ್ತದೆ. **ಶ್ರೀಮತಿ ವೀಣಾ ಮತ್ತು ನಿರಂಜನ** ಸ್ವತಂತ್ರವಾಗಿ ವ್ಯವಹರಿಸಲು ಈ ಷೆಡ್ಯೂಲ್ ಆಸ್ತಿ ಮೇಲೆ ವ್ಯವಹರಿಸಲು ಯಾವುದೇ ಹಿತಾಸಕ್ತಿ ಹೊಂದಿರುವುದಿಲ್ಲ.
ಆದ್ದರಿಂದ ಸಾರ್ವಜನಿಕರು ಮೇಲೆ ಹೇಳಿದ ವ್ಯಕ್ತಿಗಳ ಅಥವಾ ಅವರ ಪ್ರತಿನಿಧಿಗಳ ಜೊತೆ ಮೇಲ್ಕಂಡ ಆಸ್ತಿಯಲ್ಲಿ ಸಂಬಂಧಿಸಿದಂತೆ ಯಾವುದೇ ವ್ಯವಹಾರ, ವಗೈರೆ ಮಾಡಬಾರದಾಗಿ ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಯಾವುದೇ ವ್ಯಕ್ತಿಗಳು ಸ್ವತ್ತಿಗೆ ಸಂಬಂಧಿಸಿದಂತೆ ಸದರಿಯವರೊಂದಿಗೆ ವ್ಯವಹರಿಸಿದಲ್ಲಿ ಅದಕ್ಕೆ ತಾವುಗಳೇ ಜವಾಬ್ದಾರರು ಆಗಿರುತ್ತೀರಿ. 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ದಾವಣಗೆರೆ ರವರು ಅಸಲು **ದಾವೆ 27/2021ರಲ್ಲಿ** ಈ ಆಸ್ತಿಗೆ ಸಂಪೂರ್ಣ ತಡೆಯಾಜ್ಞೆ (ಇಂಜೆಕ್ಷನ್ ಆರ್ಡರ್) ನೀಡಿರುತ್ತಾರೆ. ಆದ್ದರಿಂದ ಯಾರೂ ಸಹ ಈ ಷೆಡ್ಯೂಲ್ ಆಸ್ತಿ ಮಾರಾಟ, ವಗೈರೆ ಮಾಡಬಾರದೆಂದು ದಿನಾಂಕ 01.02.2021ರಂದು ಆದೇಶ ಮಾಡಿರುತ್ತಾರೆ. ಆದ ಕಾರಣ ಸಾರ್ವಜನಿಕರು ಯಾರು ಕೂಡ ಈ ಎರಡು ಎಕರೆ ಆಸ್ತಿಯಲ್ಲಿ ಯಾವುದೇ ವ್ಯವಹಾರ ಮಾಡಬಾರದಾಗಿ ಮತ್ತು ವ್ಯವಹರಿಸಿ ಲುಕ್ಸಾನು ಹೊಂದಬಾರದೆಂದು ತಿಳಿಸಲಾಗಿದೆ. ಒಂದು ವೇಳೆ ಖರೀದಿ ವ್ಯವಹಾರ ನಡೆಸಿ ಆಸ್ತಿ ತೆಗೆದುಕೊಂಡಲ್ಲಿ ನನ್ನ ಕಕ್ಷಿದಾರರ ಹಕ್ಕಿಗೆ ಹಿಸ್ಸೆಗೆ ಬಾಧಕ ಹಾಗೂ ಬಂಧನಕಾರಿಯಾಗುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

**ಷೆಡ್ಯೂಲ್**

**ದಾವಾ ಓ.ಎಸ್. 27/21 ರಲ್ಲಿ ಷೆಡ್ಯೂಲ್ ಆಸ್ತಿ**

ದಾವಣಗೆರೆ ಜಿಲ್ಲೆ, ತಾ, ಕಸಬಾ ಹೋಬಳಿ, ಶ್ಯಾಬನೂರು ಗ್ರಾಮದ ಸರ್ವೆ ನಂ.205/1ಪಿರ
ಅಳತೆ: ಎರಡು ಎಕರೆ ಗುಂಟೆ ಇಲ್ಲಾ ಅಸೆಸ್‌ಮೆಂಟ್ ರೂ.1-65 ಇದ್ದು ಇದಕ್ಕೆ ಚಕ್ಕುಬಂದಿ:-
**ಪೂರ್ವಕ್ಕೆ ; ಜಿ.ಮುನಿಯಪ್ಪನವರ ಮಕ್ಕಳ ಆಸ್ತಿ**
**ಪಶ್ಚಿಮಕ್ಕೆ : ಗೌಡಪ್ಪ ಹನುಮಂತಪ್ಪ ಆಸ್ತಿ**
**ಉತ್ತರಕ್ಕೆ: ಚಾನಲ್ ರೋಡ್ ನಂತರ ನಮ್ಮ ಆಸ್ತಿ ಆದರಾಚೆ ಗೌಡಪ್ಪ ಬಸವರಾಜಪ್ಪ ಮತ್ತು ಹೆಚ್.ಆರ್.ಲಿಂಗರಾಜ ರವರ ಆಸ್ತಿಗಳು**
**ದಕ್ಷಿಣಕ್ಕೆ : ಕೊಂಡಜ್ಜಿ ಲೇಟ್ ರುದ್ರಪ್ಪ ಮತ್ತು ಲೇಟ್ ಶೇಖರಪ್ಪ ಇವರ ಆಸ್ತಿ**

**ಕಕ್ಷಿದಾರರ ಸಹಿ/-**
**ಶ್ರೀಮತಿ ಪ್ರೇಮಮ್ಮ ಯಾನೆ ಪ್ರೇಮಲೀಲಾ**

**ಸಿ. ಅಜಯ್**
ಮಹೇಶ ಕಾಂಪ್ಲೆಕ್ಸ್, ಪೂಜಾ ಹೋಟೆಲ್ ಪಕ್ಕ ಹಳೇ ಪಿ.ಬಿ.ರಸ್ತೆ, ದಾವಣಗೆರೆ.
**ಮೊ: 97430 19896**

## ಹಡಗಲಿ ತಾಲ್ಲೂಕಿನ 25 ಗ್ರಾಮ ಪಂಚಾಯ್ತಿ ಅಧ್ಯಕ್ಷರು-ಉಪಾಧ್ಯಕ್ಷರ ಆಯ್ಕೆಯ ವಿವರ

1. ನಂದಿಹಳ್ಳಿ- ಅಧ್ಯಕ್ಷರು : **ಶಾರದಬಾಯಿ,** ಉಪಾಧ್ಯಕ್ಷರು : **ವಸಂತ್‌ಕುಮಾರ್**
2. ಸೋಗಿ - ಅಧ್ಯಕ್ಷರು : **ಕೆ.ದುರುಗಮ್ಮ,** ಉಪಾಧ್ಯಕ್ಷರು : **ಎಂ.ಸುಷ್ಮಿತಾ**
3. ಮಹಾಜನದಹಳ್ಳಿ - ಅಧ್ಯಕ್ಷರು : **ಕೆ.ಶಕುಂತಲಮ್ಮ,** ಉಪಾಧ್ಯಕ್ಷರು : **ಬಿ.ಸೇತುರಾಮನಾಯ್ಕ**
4. ಉತ್ತಂಗಿ - ಅಧ್ಯಕ್ಷರು : **ಎಸ್.ನೀಲಮ್ಮ,** ಉಪಾಧ್ಯಕ್ಷರು : **ಡಿ.ಪವಿತ್ರ**
5. ಹಿರೇಮಲ್ಲನಕೆರೆ - ಅಧ್ಯಕ್ಷರು : **ಶಿವಾನಂದ ಐನಳ್ಳಿ,** ಉಪಾಧ್ಯಕ್ಷರು : **ಟಿ.ರೇಣುಕಮ್ಮ**
6. ಪಶ್ಚಿಮಕಾಲ್ಪಿ - ಅಧ್ಯಕ್ಷರು : **ಕೇಮಣಿಬಾಯಿ,** ಉಪಾಧ್ಯಕ್ಷರು : **ಎನ್.ತಿಪ್ಪಾನಾಯ್ಕ**
7. ಸೋವೇನಹಳ್ಳಿ - ಅಧ್ಯಕ್ಷರು : **ಅಂಕ್ಲಿ ವನಜಾಕ್ಷಿ,** ಉಪಾಧ್ಯಕ್ಷರು : **ಬಿ.ನಿಂಗನಗೌಡ**
8. ಕೊಂಬಳಿ - ಅಧ್ಯಕ್ಷರು : **ಹರಿಜನ ಶಾಂತವ್ವ,** ಉಪಾಧ್ಯಕ್ಷರು : **ಕೆ.ರಾಮಪ್ಪ**
9. ನವಲಿ - ಅಧ್ಯಕ್ಷರು : **ಟಿ.ಯಶೋದಮ್ಮ,** ಉಪಾಧ್ಯಕ್ಷರು : **ಹೆಚ್.ಎಂ.ಶಕುಂತಲ**
10. ಮಾಗಳ - ಅಧ್ಯಕ್ಷರು : **ಈ.ಟಿ.ತಿರುಕಪ್ಪ,** ಉಪಾಧ್ಯಕ್ಷರು : **ಎಸ್.ರೇಣುಕಮ್ಮ**
11. ಕೆ.ಅಯ್ಯನಹಳ್ಳಿ - ಅಧ್ಯಕ್ಷರು : **ಟಿ.ಹೂವಕ್ಕ,** ಉಪಾಧ್ಯಕ್ಷರು : **ಹರಿಜನ ಮಂಜವ್ವ**
12. ಹಗರನೂರು - ಅಧ್ಯಕ್ಷರು : **ಆಲೂರು ಗಂಗಮ್ಮ,** ಉಪಾಧ್ಯಕ್ಷರು : **ಭೋವಿ ಶ್ರೀನಿವಾಸ್**
13. ಡಿ.ಜಿ.ಹಳ್ಳಿ - ಅಧ್ಯಕ್ಷರು : **ನಂದಿಹಳ್ಳಿ ಮಹೇಂದ್ರ,** ಉಪಾಧ್ಯಕ್ಷರು : **ಮಾರಿಕಾಬಾಯಿ**
14. ಕತ್ತೆಬೆನ್ನೂರು - ಅಧ್ಯಕ್ಷರು : **ಹಾವನೂರು ನೀಲಪ್ಪ,** ಉಪಾಧ್ಯಕ್ಷರು : **ಡಿ.ಸುನಿತಾ**
15. ನಾಗ್ತಿಬಸಾಪುರ - ಅಧ್ಯಕ್ಷರು : **ಶಾರದಬಾಯಿ,** ಉಪಾಧ್ಯಕ್ಷರು : **ವಸಂತನಾಯ್ಕ**
16. ಎಂ.ಎಂ.ವಾಡ- ಅಧ್ಯಕ್ಷರು : **ದೇವಿಬಾಯಿ,** ಉಪಾಧ್ಯಕ್ಷರು : **ಪಿ.ಸುಧಾ**
17. ಹೊಳಲು - ಅಧ್ಯಕ್ಷರು : **ಕುಂದುಗೋಳ ನಾಗಮ್ಮ,** ಉಪಾಧ್ಯಕ್ಷರು : **ವಡ್ಡರ ನಾಗರಾಜ್**
18. ದಾಸನಹಳ್ಳಿ - ಅಧ್ಯಕ್ಷರು : **ಹರಿಜನ ಮಂಜವ್ವ,** ಉಪಾಧ್ಯಕ್ಷರು : **ಬಿ.ಹುಲಿಗೆಮ್ಮ**
19. ಮೈಲಾರ - ಅಧ್ಯಕ್ಷರು : **ಭರಮಪ್ಪ ಇಟ್ಟಿಗಿ,** ಉಪಾಧ್ಯಕ್ಷರು : **ಕೆ.ಸರಸ್ವತಿ**
20. ಹ್ಯಾರಡ - ಅಧ್ಯಕ್ಷರು : **ರೇಣುಕಮ್ಮ,** ಉಪಾಧ್ಯಕ್ಷರು : **ಹೌಸಿ ಸಿದ್ದೇಶ್ವರ**
21. ಹೊಳಗುಂದಿ - ಅಧ್ಯಕ್ಷರು : **ಸಿದ್ದವ್ವ ಬಾಣದ,** ಉಪಾಧ್ಯಕ್ಷರು : **ರಮೇಶ್**
22. ಕುರುವತ್ತಿ - ಅಧ್ಯಕ್ಷರು : **ಸುವರ್ಣಮ್ಮ,** ಉಪಾಧ್ಯಕ್ಷರು : **ಎ.ದೇವಕ್ಕ**
23. ಮಕರಬ್ಬಿ - ಅಧ್ಯಕ್ಷರು : **ಪಾಟೀಲ ಮಲ್ಲಿಕಾರ್ಜುನಗೌಡ,** ಉಪಾಧ್ಯಕ್ಷರು : **ಜಿ.ನೀಲವ್ವ**
24. ಬೀರಬ್ಬಿ - ಅಧ್ಯಕ್ಷರು : **ಅಂಗೂರು ಸಿದ್ದಮ್ಮ,** ಉಪಾಧ್ಯಕ್ಷರು : **ಸುಶೀಲಬಾಯಿ**
25. ಹಿರೇಹಡಗಲಿ - ಅಧ್ಯಕ್ಷರು : **ಈಡಿಗರ ಸಾವಿತ್ರಮ್ಮ,** ಉಪಾಧ್ಯಕ್ಷರು : **ಬಾಣದ ರತ್ನಮ್ಮ**
26. ಇಟ್ಟಿಗಿ - ಪ್ರಕಟಿತ ಮೀಸಲಾತಿಯ ಗೊಂದಲದಿಂದ ಚುನಾವಣೆ ಮುಂದೂಡಲಾಗಿದೆ.

# ಭವ್ಯ ರೈತ ಭಾರತಕ್ಕೆ ಬೇರೆಯವರ ಹಸ್ತಕ್ಷೇಪ ಏಕೆ ?...

ರಿಯಾನಾ, ಗ್ರೇಟಥನ್ ಬರ್ಗ್, ಜಾನಕ್ಯೂಸೆಕ್, ಮಿಯಾ ಖಲೀಫಾ, ಬ್ರಿಟಿಷ್ ಗಾಯಕ ಬಲ್ಜಿತ್ ಸಿಂಗ್, ಜಗಮಿತ್ ಸಿಂಗ್ ಇವರೆಲ್ಲ ಯಾರು? ನಮ್ಮ ರೈತರ ಪರವಾಗಿ ಟ್ವೀಟ್ ಮಾಡುವ ನೈತಿಕತೆ ಏನಿದೆ? "ಹೊನ್ನ ಬಿತ್ತೇವು ಹೊಲಕ್ಕೆಲ್ಲ" ಎನ್ನುವ ರೈತರ ನುಡಿಗಟ್ಟಿನ ಅರ್ಥ ತಿಳಿದಿದೆಯೇ.

ಇವರು ಖಲಿಸ್ತಾನಿಗಳೋ ಅಥವಾ ಖಲಿಸ್ತಾನಿಗಳ ಪರವಾಗಿ ಜಗತ್ತಿಗೆ ಭಾರತದಲ್ಲಿ ಏನೋ ನಡೆಯುತ್ತದೆ ಎಂದು ತೋರಿಸುವ ದುಷ್ಟ ಶಕ್ತಿಗಳೋ? ಸಂಭಾವನೆ ಪಡೆದು ಟ್ವೀಟ್ ಮಾಡುತ್ತಿರುವ ಇವರಿಗೆ ನಮ್ಮ ರಾಷ್ಟ್ರದ ರೈತ ಸಮುದಾಯದ ಬಗ್ಗೆ ಏನು ತಿಳಿದಿದೆ. ಪ್ರಚೋದನಕಾರಿ ಟ್ವೀಟ್ ಮಾಡುವುದರಿಂದ ನಮ್ಮ ದೇಶದ ಘನತೆ ಮತ್ತು ಒಗ್ಗಟ್ಟನ್ನು ಎಂದಿಗೂ ಹಾಳು ಮಾಡಲು ಆಗದು.

ರೈತರು ನಮ್ಮ ದೇಶದ ಬೆನ್ನೆಲುಬು, ಮುಖ್ಯ ಸಮುದಾಯ. ಅವರ ಸಮಸ್ಯೆಗಳ ನಿವಾರಣೆ, ಅವರನ್ನು ರಕ್ಷಿಸುವ ಜವಾಬ್ದಾರಿ ಇರುವುದು ನಮ್ಮ ಸರ್ಕಾರಗಳಿಗೆ ಹೊರತು, ಜಗತ್ತಿನ ಯಾವುದೋ ಮೂಲೆಯಲ್ಲಿರುವ ಪಾಪ್ ಹಾಡುಗಾರರಿಗಲ್ಲ. ಇಂತವರ ವಿಚ್ಛಿದ್ರಕಾರಿ ಟ್ವೀಟ್‌ಗಳನ್ನು ಪ್ರತಿಯೊಬ್ಬ ಭಾರತೀಯನು ಖಂಡಿಸಬೇಕು.

ಇವರ ವಿರುದ್ಧ ಹೋರಾಡಲು ಒಂದಾಗಬೇಕು. ಕೆನಡಾದ ಪ್ರಧಾನಿ ಜಸ್ಟಿನ್ ಟ್ರೂಡೊಗೆ ನಮ್ಮ ದೇಶದ ರೈತರ ಪ್ರತಿಭಟನೆಯನ್ನು ಬೆಂಬಲಿಸುವ ಹುಚ್ಚು ಏಕೆ?



ಕೆನಡಾದಲ್ಲಿಯಾಗಲೀ ಅಥವಾ ಟ್ವೀಟ್ ಮಾಡಿರುವ ತಾರೆಯರ ದೇಶದಲ್ಲಾಗಲೀ ತಮ್ಮ ದೇಶದ ಎಲೆಯಲ್ಲಿ ಸತ್ತು ಬಿದ್ದಿರುವ ಹೆಗ್ಗಣದ ಅರಿವಿಲ್ಲದೆ, ನೋಣವನ್ನು ಸಾಯಿಸಿ ನಮ್ಮ ಎಲೆಯಲ್ಲಿ ತಂದು ಹಾಕುವ ವ್ಯರ್ಥ ಪ್ರಯತ್ನವನ್ನು ನಡೆಸಿದ್ದಾರೆ. ನಿಜಕ್ಕೂ ಇದು ಹಾಸ್ಯಾಸ್ಪದ.

ಆದರೆ, ಇದರಲ್ಲಿ ನಮ್ಮ ರಾಷ್ಟ್ರದ ಐಕ್ಯತೆ-ಬಾಂಧವ್ಯವನ್ನು ಕದಡುವ, ಕೆಡಿಸುವ ಚಿಂತನೆಗಳು ಅಡಗಿವೆ.

ಭಾರತದಲ್ಲಿ ಏನೋ ಆಗಿ ಹೋಗಿದೆ ಎಂದು ತೋರಿಸುವ ನೀತಿಗೆಟ್ಟ ಷಡ್ಯಂತ್ರಗಳನ್ನು ಪ್ರತಿಯೊಬ್ಬ ಭಾರತೀಯ ಪ್ರಜೆ ಖಂಡಿಸಬೇಕಿದೆ. ಅಷ್ಟೇ ಅಲ್ಲ ಕುವೆಂಪು ಅವರು ಹೇಳಿದ ಹಾಗೆ "ಸತ್ತಂತಿಹರನು ಬಡಿದೆಚ್ಚರಿಸಬೇಕಾಗಿದೆ".

ಮುಂದೊಮ್ಮೆ ಭಾರತದ ಒಗ್ಗಟ್ಟನ್ನು ಒಡೆಯುವ ಸಂಚು ಎಂದೂ ಫಲಿಸುವುದಿಲ್ಲ. ನಾವೆಲ್ಲರೂ ಒಂದೇ, ನಮ್ಮ ಸಮಸ್ಯೆಗಳನ್ನು ನಾವೇ ಪರಿಹರಿಸಿಕೊಳ್ಳುತ್ತೇವೆ. ಬೇರೆಯರ ಹಸ್ತಕ್ಷೇಪದ ಅವಶ್ಯಕತೆ ಇಲ್ಲ. ಮಹಾಭಾರತದಲ್ಲಿ ಧರ್ಮರಾಯ ಹೇಳಿದ ಹಾಗೆ ಹಸ್ತಿನಾಪುರದ ಮೇಲೆ ಯಾರಾದರೂ ಯುದ್ಧ ಮಾಡಿದರೆ, ಅಣ್ಣ-ತಮ್ಮಂದಿರಾದ ನಾವು ಕೌರವ-ಪಾಂಡವರು ಒಂದಾಗಿ ಯುದ್ಧ ಮಾಡುತ್ತೇವೆ ಎಂಬುದನ್ನು ಉಲ್ಲೇಖಿಸಬೇಕಾಗಿದೆ.

ಸ್ವಾತಂತ್ರ್ಯ ಬಂದ ನಂತರ ಆಡಳಿತಕ್ಕೆ ಬಂದ ಎಲ್ಲಾ ಸರ್ಕಾರಗಳು ರೈತರ ಪರವಾಗಿಯೇ ಕೆಲಸ, ಕಾಯಿದೆಗಳನ್ನು ಮಾಡಿಕೊಂಡು ಬಂದಿವೆ. ರಾಷ್ಟ್ರದ ಪ್ರಗತಿ ಕಾರ್ಯದಲ್ಲಿ ಕೆಲವೊಂದು ಬದಲಾವಣೆ ಅವಶ್ಯ ಮತ್ತು ಅನಿವಾರ್ಯ. ಇಲ್ಲದಿದ್ದಲ್ಲಿ ಮಾಡಿದ್ದನ್ನೇ ಮಾಡಿದಲ್ಲಿ ಪ್ರಗತಿ ಹೇಗೆ ಸಾಧ್ಯ?... ಬ್ರಿಟೀಷರು ಮಾಡಿದ ಕಾಯಿದೆ "ತುಂಡು ಭೂಮಿ ರೈತ ನೀನು ಬೆಳೆದ ಬೆಳೆಗೆ ಬೆಲೆ ಕಟ್ಟುವವರು ನಾವೇ, ಕೊಳ್ಳುವವರು ನಾವೇ" ಎಂದರೆ, ಅದನ್ನೇ ನಾವು ಉಳಿಸಿಕೊಂಡು ಹೋಗಬೇಕೇ? ಪ್ರಯತ್ನ, ಪ್ರಯೋಗ, ಸೃಜನ ಶೀಲತೆ, ದೂರದೃಷ್ಟಿ, ಯೋಚನೆ ಮತ್ತು ಯೋಜನೆಗಳು ಆಡಳಿತ ಪಕ್ಷದ ಹೊಣೆ. ಜನತೆಯ ಕ್ಷೇಮಾಭಿವೃದ್ಧಿ, ರೈತರ ಕಾಳಜಿ, ರಾಷ್ಟ್ರದ ಐಕ್ಯತೆ-ಬಾಂಧವ್ಯ, ರಾಷ್ಟ್ರದ ರಕ್ಷಣೆ, ವಿದ್ಯೆ-ಉದ್ಯೋಗ ಚಿಂತನೆಗಳು ಆಡಳಿತ ಮತ್ತು ವಿರೋಧ ಪಕ್ಷಗಳ ಜವಾಬ್ದಾರಿಗಳು.

ಪ್ರಸ್ತುತ ಕೇಂದ್ರ ಸರ್ಕಾರ ಹೊಸ ಕೃಷಿ ಕಾಯ್ದೆಗಳನ್ನು ತಂದಿದ್ದು, ಅವುಗಳ ಅನುಷ್ಠಾನಕ್ಕೆ ರೈತರ ಜೊತೆಯಲ್ಲಿ ಮಾತುಕತೆಯ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳುವ ಪ್ರಯತ್ನದಲ್ಲಿದೆ. ಈಗಾಗಲೇ ಹಲವು ಬಾರಿ ರೈತರ ಜೊತೆಯಲ್ಲಿ ಮಾತುಕತೆ ಮಾಡಿರುತ್ತದೆ.

ಅಲ್ಲದೇ ಹೊಸ ಕೃಷಿ ಕಾಯಿದೆಗಳನ್ನು ಅಮಾನತ್ತಿನಲ್ಲಿಟ್ಟು ರೈತ ಸಂಘಟನೆಗಳ ಜೊತೆ ಮಾತನಾಡುವ ಮುಕ್ತ ಅವಕಾಶವನ್ನು ನೀಡಿರುತ್ತದೆ.

*"ಬೆಳೆಯ ಭೂಮಿಯಲ್ಲೊಂದು*
*ಪ್ರಳಯದ ಕಸ ಹುಟ್ಟಿ*
*ತಿಳಿಯಲೀಯದು, ಎಚ್ಚರಲೀಯದು.*
*ಎನ್ನುವ ಗುಣವೆಂಬ ಕಸವ ಕಿತ್ತು*
*ಸಲಹಯ್ಯಾ, ಲಿಂಗತಂದೆ*
*ಸುಳಿದೆಗೆದು ಬೆಳೆವೆನು*
*ಕೂಡಲಸಂಗಮದೇವಾ"*

ಹುಲುಸಾಗಿ ಬೆಳೆದ ಭವ್ಯ ರೈತ ಭಾರತದಲ್ಲಿ ಇಂತಹ ಕಳೆ ಚಿಗುರಲು ಬಿಡಬಾರದು, ಬೇರು ಸಹಿತ ಕಿತ್ತೊಗೆಯಬೇಕು. ಆಗ ಮಾತ್ರ ಕೃಷಿ ಪ್ರಧಾನ ಭಾರತ ದೇಶ ಬೆಳೆಯಲು ಸಾಧ್ಯ, ಬೆಳಗಲು ಸಾಧ್ಯ.

**- ಹೆಚ್.ಎನ್. ಶಿವಕುಮಾರ್**
ಮಾಜಿ ಸದಸ್ಯರು,
ಮಹಾನಗರ ಪಾಲಿಕೆ,
ದಾವಣಗೆರೆ.
ಮಾಜಿ ಸೆನೆಟ್ ಮತ್ತು
ಸಿಂಡಿಕೇಟ್ ಸದಸ್ಯರು,
ಕುವೆಂಪು
ವಿಶ್ವವಿದ್ಯಾನಿಲಯ



# ಮೋದಿ, ಜನತೆ ಬೆಂಬಲ ಇರುವವರೆಗೆ ನಾನೇ ಮುಖ್ಯಮಂತ್ರಿ

**(3ನೇ ಪುಟದಿಂದ)** ಗಳಿಸುತ್ತೇವೆ ಎಂದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ವಿರುದ್ಧ ಹರಿಹಾಯ್ದರು.

ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸುದೀರ್ಘವಾಗಿ ಉತ್ತರಿಸುವ ಸಂದರ್ಭದಲ್ಲಿ ಮಾತನಾಡಿ, ನಿಮಗೆ ನಾನು ಅಧಿಕಾರದಿಂದ ಕೆಳಗಿಳಿಯುತ್ತೇನೆ ಎಂಬ ಮುಂಜಾನೆ ಕನಸು ಬೀಳುತ್ತಿರುತ್ತದೆ, ಅದನ್ನು ಮಧ್ಯಾಹ್ನದ ನಂತರ ಸಾರ್ವಜನಿಕವಾಗಿ ಹೇಳುತ್ತೀರಿ. ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದೇನೆ, ಎಲ್ಲಾ ಸಂದರ್ಭಗಳಲ್ಲೂ ಕಷ್ಟ ಅನುಭವಿಸಿದ್ದೇನೆ. ಈ ಬಾರಿಯಂತೂ ದೊಡ್ಡ ಸಂಕಷ್ಟಗಳೇ ಎದುರಾದವು, ಆದರೂ ಸೌಮ್ಯದಿಂದ ಎಲ್ಲವನ್ನೂ ತಾಳ್ಮೆಯಿಂದ ಸ್ವೀಕರಿಸಿ, ಎದುರಿಸಿ ಅಭಿವೃದ್ಧಿ ಪರ ಸರ್ಕಾರ ನೀಡುವ ಮೂಲಕ ಕೋವಿಡ್-19 ಸೋಂಕು ಮಹಾಮಾರಿಯನ್ನೂ ನಿಭಾಯಿಸಿದ್ದೇನೆ, ಇದಕ್ಕೆ ಕೇಂದ್ರ ಸರ್ಕಾರದಿಂದಲೂ ನನಗೆ ಪ್ರಶಂಸೆ ವ್ಯಕ್ತವಾಗಿದೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ವರಿಷ್ಠ ನಾಯಕರ ಆಶೀರ್ವಾದ ಇರುವವರೆಗೂ ನನ್ನ ನಾಯಕತ್ವಕ್ಕೆ ಎಂದೂ ಚ್ಯುತಿ ಬರುವುದಿಲ್ಲ, ನೀವು ಇನ್ನು ಮುಂದೆ ಕನಸು ಕಾಣುವುದನ್ನು ಬಿಟ್ಟು, ಸೊರಗಿ ಸೋತು, ಸುಣ್ಣವಾಗಿರುವ ನಿಮ್ಮ ಪಕ್ಷದ ಸಂಘಟನೆ ಬಗ್ಗೆ ಗಮನ ಕೊಡಿ, ಆಗಲಾದರೂ ಸ್ವಲ್ಪ ಚೇತರಿಸಿಕೊಳ್ಳುವ ಸಾಧ್ಯತೆ ಇದೆ ಎಂದರು.

ಸಿದ್ದರಾಮಯ್ಯ ಅವರ ಮಾತನ್ನು ನೆನಪಿಸಿದ ಅವರು, ಡಿನೋಟಿಫಿಕೇಷನ್ ಆರೋಪದ ಹಿನ್ನೆಲೆಯಲ್ಲಿ ನಾನು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಕೊಡಬೇಕು ಎಂದಿದ್ದಾರೆ. ಆದರೆ, ಅದರ ಅಗತ್ಯವಿಲ್ಲ. ಇಂದು ಯಾರ ಮೇಲೆ ಆರೋಪಗಳಿಲ್ಲ? ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರಿಂದ ಹಿಡಿದು ಬಹುತೇಕರ ಮೇಲೆ ಆರೋಪಗಳಿವೆ, ಹಲವರು ಜಾಮೀನಿನ ಮೇಲೆ ಹೊರಗಿದ್ದಾರೆ ಎಂದು ಹೇಳಿದರು.

ಈ ನಾಯಕರು ಯಾರು ಎಂದು ನಾನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅವರು ಈ ಮನೆಯ ಸದಸ್ಯರಲ್ಲದೇ ಇರುವುದರಿಂದ ನಾನವರ ಹೆಸರುಗಳನ್ನು ಹೇಳಲಾರೆ.

ಮುಂದುವರೆದು ಮಾತನಾಡಿದ ಅವರು, ಸಿದ್ಧರಾಮಯ್ಯ ಅಧಿಕಾರದಲ್ಲಿದ್ದಾಗ ತಮ್ಮ ಮೇಲೆ ಎಂತೆಂತಹ ಆರೋಪಗಳು ಕೇಳಿ ಬಂದಿದ್ದವು ಎಂಬುದನ್ನು ನೆನಪಿಸಿಕೊಳ್ಳಲಿ ಎಂದು ಕುಟುಕಿದರು.

ಬಿಡಿಎ ಡಿನೋಟಿಫಿಕೇಷನ್ ಪ್ರಕರಣವನ್ನು ರೀ ಡೂ ಎಂದಿರಲ್ಲ, ಅದೇನು ಹಗರಣವಲ್ಲವೇ? ನೀವು ಬಹಳ ಬುದ್ಧಿವಂತಿಕೆಯಿಂದ ಅದನ್ನು ಮಾಡಿದ್ದೀರಿ, ನಾನು ಅಷ್ಟು ಜಾಣನಲ್ಲ ಎಂದು ಸಿದ್ದರಾಮಯ್ಯ ಅವರನ್ನು ಟೀಕಿಸಿದರು.

ನಿಮ್ಮ ಕಾಲದಲ್ಲಿ ಎ.ಸಿ.ಬಿ ಮಾಡಿ ನಿಮಗೆ ಬೇಕಾದ ಅಧಿಕಾರಿಗಳನ್ನು ಹಾಕಿಕೊಂಡು ನಿಮ್ಮ ಮತ್ತು ಮಂತ್ರಿಗಳ ಮೇಲಿನ ಆರೋಪಗಳೆಲ್ಲದರ ಬಗ್ಗೆ ತನಿಖೆ ನಡೆಸಿ 'ಬಿ' ರಿಪೋರ್ಟ್ ಹಾಕಿಸಿದಿರಿ. ಏನೆಲ್ಲ ಹಗರಣಗಳ ಆರೋಪ ನಿಮ್ಮ ಮೇಲಿತ್ತು ಎಂಬುದನ್ನು ನೆನಪಿಸಿಕೊಳ್ಳಿ, ಈ ಆರೋಪಗಳು ಬಂದ ಕೂಡಲೇ ನೀವು ರಾಜೀನಾಮೆ ನೀಡಿದಿರಾ? ಎಂದು ಯಡಿಯೂರಪ್ಪ ಪ್ರಶ್ನಿಸಿದರು.

ಮುಖ್ಯಮಂತ್ರಿ ಅವರ ಮೊನಚು ಮಾತುಗಳಿಂದ ಜರ್ಝರಿತರಾದಂತೆ ಕಂಡುಬಂದ ಸಿದ್ದರಾಮಯ್ಯ, ಸೋಲನ್ನು ಒಪ್ಪಿಕೊಳ್ಳಲಾರದೆ, ಉಪಚುನಾವಣೆಯಲ್ಲಿ ಅಧಿಕಾರದಲ್ಲಿದ್ದ ಪಕ್ಷವೇ ಜಯಭೇರಿ ಬಾರಿಸುತ್ತದೆ ಎಂದರು.

ನಾನು ಅಧಿಕಾರದಲ್ಲಿದ್ದಾಗ ಎಲ್ಲಾ ಉಪಚುನಾವಣೆಗಳನ್ನು ಗೆದ್ದೇ ಅಲ್ವೇ ಯಡಿಯೂರಪ್ಪ ಅವರೇ, ಆಗೆಲ್ಲಾ ಏನು ನಡೆಯುತ್ತದೆ ಎಂದು ನಾನೂ ಹೇಳಲಾಗದು, ನೀವೂ ಹೇಳಲಾಗದು. ಇಷ್ಟು ಹುಮ್ಮಸ್ಸು ಹೊಂದಿರುವ ನೀವು ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಬನ್ನಿ ಫಲಿತಾಂಶ ಏನಾಗುತ್ತದೆ ಎಂದು ನೋಡಿ ಎಂದು ಆಹ್ವಾನ ನೀಡಿದರು.

ಅಷ್ಟೇ ಖಾರವಾಗಿ ಉತ್ತರಿಸಿದ ಮುಖ್ಯಮಂತ್ರಿ, ಯಾವ ಬದಲಾವಣೆಯೂ ಆಗುವುದಿಲ್ಲ, ನಿಮ್ಮ ಕನಸಿನ ಕೋಟೆಯಿಂದ ಹೊರಬನ್ನಿ, ನಿಮಗೆ ಯಾವ ಸ್ಥಾನ ಇದೆಯೋ ಮುಂದೆಯೂ ಅದೇ ಗಟ್ಟಿ ಎಂದು ಕುಟುಕಿದರು.

ಸಿದ್ಧರಾಮಯ್ಯ ಅಭಿವೃದ್ಧಿ ಕುರಿತು ಮಾತನಾಡುತ್ತಾರೆ ಎಂದು ನಿರೀಕ್ಷಿಸಿದ್ದೆ, ಆದರೆ ಅವರು ರಾಜಕೀಯವಾಗಿ ನಮ್ಮನ್ನು ದೂಷಿಸಿದ್ದಾರೆ ಎಂದು ಹೇಳಿದರು.

ಕಳೆದ ಚುನಾವಣೆಯಲ್ಲಿ ಅತ್ಯಂತ ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದ್ದು ಬಿಜೆಪಿ. ಆದರೆ ಎಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೋ ಎಂದು ಹೆದರಿದ ಕಾಂಗ್ರೆಸ್ ಪಕ್ಷ, ಜೆಡಿಎಸ್ ಜತೆ ಕೈಜೋಡಿಸಿ ಮೈತ್ರಿ ಸರ್ಕಾರ ರಚಿಸಿತು.

ಆದರೆ, ಕುಮಾರಸ್ವಾಮಿ ಅವರಿಗೆ ಕೆಲಸ ಮಾಡಲು ಬಿಡದೆ ಹಿಂಸೆ ನೀಡಿದ ಬಗ್ಗೆ ನಾನು ಹೇಳಬೇಕಿಲ್ಲ, ಸ್ವತಃ ಅವರೇ ಹೇಳಿದ್ದಾರೆ, ನನ್ನನ್ನು ಕಾಂಗ್ರೆಸ್ ಪಕ್ಷ ಕ್ಲರ್ಕ್ ತರ ನೋಡಿಕೊಂಡಿದೆ, ಆದ್ದರಿಂದ, ನಾನು ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗಿಲ್ಲ ಎಂದು ಹೇಳಿದರು.

## ನಗರದಲ್ಲಿ ಇಂದು ಸ್ಕೌಟ್ಸ್, ಗೈಡ್ಸ್ ಘಟಕ ಉದ್ಘಾಟನೆ

ಎಆರ್‌ಎಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 10.15 ಕ್ಕೆ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ, ಸಾಂಸ್ಕೃತಿಕ, ಕ್ರೀಡಾ, ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಉದ್ಘಾಟನಾ ಸಮಾರಂಭ ನಡೆಯಲಿದೆ.

ದಾವಣಗೆರೆ ವಿವಿ ಕುಲಸಚಿವ (ಆಡಳಿತ) ಡಾ. ಬಸವರಾಜ್ ಬಣಕಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಎಲ್. ಭರತ್‌ಕುಮಾರ್ ಅಧ್ಯಕ್ಷತೆ ವಹಿಸುವರು. ಡಾ. ಎಂ.ಎಸ್. ರಾಜಕುಮಾರ್, ಡಾ. ಅಶೋಕಕುಮಾರ್ ವೀ. ಪಾಳೇದ, ಪ್ರೊ. ಡಿ.ಹೆಚ್. ಪ್ಯಾಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

## ಹೊಸ ಮಾದರಿಯ ವೆಸ್ಪಾ ಬಿಡುಗಡೆ



ದಾವಣಗೆರೆ, ಫೆ.5- ಅಪ್ರಿಲಿಯಾ ಮತ್ತು ವೆಸ್ಪಾ ಕಂಪನಿಯ ಹೊಸ ಮಾದರಿಯ SXR160 ವೆಸ್ಪಾ ಮತ್ತು ಅಪ್ರಿಲಿಯಾ ದ್ವಿಚಕ್ರ ವಾಹನಗಳ ಬಿಡುಗಡೆ ಕಾರ್ಯಕ್ರಮವು ನಗರದ ನಯನ ಮೋಟಾರ್ಸ್‌ನಲ್ಲಿ ಇಂದು ನಡೆಯಿತು. ಇದೇ ಸಂದರ್ಭದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ ಹಾಗೂ ನಯನ ಮೋಟಾರ್ಸ್ ಸಹಯೋಗದಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನೂ ನಡೆಸಲಾಯಿತು. ಆರ್.ಟಿ.ಓ ಶ್ರೀಧರ್ ಕೆ. ಮಲನಾಡ್ ಅವರು ಕಾರ್ಯಕ್ರಮವನ್ನು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆಯ ಅಧಿಕಾರಿಗಳಾದ ಸುರೇಶ್ ಎಂ, ವಾಸುದೇವ ಮತ್ತು ಜೆ.ಹೆಚ್. ಪಟೇಲ್ ಅವರ ಸಹೋದರಿ ಅನುಸೂಯಮ್ಮ, ನಯನ ಮೋಟಾರ್ಸ್ ಮಾಲೀಕರಾದ ಚಿನ್ಮಯ ಕುಂಚೂರು, ಕೊಟ್ರೇಶ್ ಶಾನಭೋಗ್, ಪಿಯಾಗಿಯಾ ಕಂಪನಿಯ ಎ.ಎಸ್.ಎಂ., ಬೆಸ್ಕಾಂ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಯಕ್ ಉಪಸ್ಥಿತರಿದ್ದರು.

## ವೃದ್ಧ ದಂಪತಿಗೆ ನೆರವಾದ ಸುಭಾನ್



ದಾವಣಗೆರೆ, ಫೆ.5- ಹೆಲ್ಪ್‌ಲೈನ್ ಸುಭಾನ್ ಅವರಿಗೆ ಗಣರಾಜ್ಯೋತ್ಸವ ದಿನದಂದು ವ್ಯಕ್ತಿಯೋರ್ವರಿಂದ ತಮಗೆ ಬಂದ ಕರೆಯಲ್ಲಿ ಹೀನಾಯ ಸ್ಥಿತಿಯಲ್ಲಿರುವ ವೃದ್ಧ ದಂಪತಿ ಬಗ್ಗೆ ಮಾಹಿತಿ ಪಡೆದರು. ತಕ್ಷಣ ಕಾರ್ಯಪ್ರವೃತ್ತರಾದ ಸುಭಾನ್, ಸ್ಥಳಕ್ಕೆ ತೆರಳಿ ವೃದ್ಧ ದಂಪತಿ ಪರಿಸ್ಥಿತಿಯನ್ನು ಅವಲೋಕಿಸಿದರು. ತೀರಾ ಹೀನಾಯ ಸ್ಥಿತಿಯಲ್ಲಿದ್ದು, ಕಸದ ಮಧ್ಯೆ ವಾಸವಾಗಿದ್ದ, ಉಡಲು ಬಟ್ಟೆ ಇಲ್ಲದ ಸ್ಥಿತಿಯಲ್ಲಿದ್ದರು. ಕೂಡಲೇ ವೃದ್ಧರನ್ನು ಶುಚಿಗೊಳಿಸಿ ನಂತರ ಅವರಿಗೆ ಬಟ್ಟೆ, ಹೊದಿಕೆ, ಟವಲ್ ಹಾಗೂ ವೃದ್ಧೆಗೆ ಸೀರೆಗಳನ್ನು ನೀಡಿ ಮುಂದೆಯೂ ಸಹಾಯ ಮಾಡುವುದಾಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಪ್ರಥಮ ದರ್ಜೆ ಸಹಾಯಕರಾದ ಎಸ್.ಡಿ. ತ್ರಿನೇತ್ರ ಅವರು ಹೆಲ್ಪ್‌ಲೈನ್ ಸುಭಾನ್ ಅವರ ಸೇವೆಯನ್ನು ಶ್ಲಾಘಿಸಿದರು. ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದರು.

## ನಗರದಲ್ಲಿ ಇಂದು ಪ್ರತಿಭಟನೆ

ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ದಿನಬಳಕೆ ವಸ್ತುಗಳಾದ ಅಡುಗೆ ಎಣ್ಣೆ, ಬೇಳೆ ಕಾಳು ಇನ್ನು ಮುಂತಾದ ವಸ್ತುಗಳ ಬೆಲೆ ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ವಿರುದ್ಧ ಸುವರ್ಣ ಕರ್ನಾಟಕ ವೇದಿಕೆಯಿಂದ ಇಂದು ಬೆಳಿಗ್ಗೆ 11.30 ಕ್ಕೆ ಅಂಬೇಡ್ಕರ್ ವೃತ್ತದಿಂದ ಜಯದೇವ ಸರ್ಕಲ್‌ವರೆಗೂ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂತೋಷ್‌ಕುಮಾರ್ ತಿಳಿಸಿದ್ದಾರೆ


**ಮನೆಗಳು ಬಾಡಿಗೆಗೆ ದೊರೆಯುತ್ತವೆ**
1) ಮೂರು ಬೆಡ್‌ರೂಂ ಮನೆ ಗ್ರೌಂಡ್ ಫ್ಲೋರ್, ನೂತನ ಕಾಲೇಜ್ ಹತ್ತಿರ
2) ಮೂರು ಬೆಡ್‌ರೂಂ, ಇಂಡಿಪೆಂಡೆಂಟ್ ಹೌಸ್, ಕಾರ್ನರ್ ಅಥಣಿ ಕಾಲೇಜ್ ಹತ್ತಿರ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166, 12110, 93410 14130

**ಬೇಕಾಗಿದ್ದಾರೆ**
✦ ಕಂಪ್ಯೂಟರ್ ಆಪರೇಟರ್ ಮಹಿಳೆಯರು - ಪುರುಷರು
✦ ಸೂಪರ್‌ವೈಸರ್
✦ ಟೆಲಿಕಾಲರ್ ಮಹಿಳೆಯರು
ಯಾವುದೇ ಡಿಗ್ರಿ ಪಾಸಾಗಿರಬೇಕು.
8861438237, 7483088761

**ಮನೆಗಳು ಮಾರಾಟಕ್ಕಿವೆ**
30x40 ಪೂರ್ವ, 40x60 ದಕ್ಷಿಣ ಮನೆ ನಿಜಲಿಂಗಪ್ಪ ಬಡಾವಣೆ, ಚಿಗಟೇರಿ ಬಡಾವಣೆ 30x40 ಪೂರ್ವ, ಮೇಲೆ, ಕೆಳಗೆ ಬಸವೇಶ್ವರ ಬಡಾವಣೆ 30x40 ಪೂರ್ವ ಕೆಳಗೆ ಮತ್ತು ಮೇಲೆ ಮನೆ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ 30x40, 38x40, 30x50 40x60 ಪೂರ್ವ, 30x40 38x40 ಪಶ್ಚಿಮ, ಬನಶಂಕರಿ ಬಡಾವಣೆ 30x55 ಪಶ್ಚಿಮ, ಶಿವಕುಮಾರಸ್ವಾಮಿ ಬಡಾವಣೆ 40x60, ಎಂಸಿಸಿ 'ಎ' ಬ್ಲಾಕ್ 35x50 ಪೂರ್ವ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

**ಮಳಿಗೆಗಳು ಬಾಡಿಗೆಗೆ ಇವೆ**
ಹರಿಹರದ ಬಸ್‌ಸ್ಟ್ಯಾಂಡ್‌ನ ಹತ್ತಿರ, ಭಾರತ್ ಆಯಿಲ್ ಮಿಲ್ ಕಾಂಪೌಂಡ್‌ನಲ್ಲಿ SM ಲಾಡ್ಜ್‌ನ ಹತ್ತಿರ ಮಳಿಗೆಗಳು (10x12 ಅಡಿ) ಬಾಡಿಗೆಗೆ ಇವೆ.
ಸಂಪರ್ಕಿಸಿ:
98444 33504

**ಸೈಟ್‌ಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿ KHB 30x50 ದಕ್ಷಿಣ (120 ಅಡಿ ರಸ್ತೆಗೆ ಹತ್ತಿರ), ವಿದ್ಯಾನಗರ ಪಕ್ಕದ ರಂಗನಾಥ ಬಡಾವಣೆಯಲ್ಲಿ 25x30, 25x30 ಅಕ್ಕ-ಪಕ್ಕ
ಮಂಜುನಾಥ್ ಏಜೆಂಟ್
98444 91792

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ. ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**1 BHK ಮನೆ ಬಾಡಿಗೆಗೆ**
ಉತ್ತರ ದಿಕ್ಕಿನ ಬಾಗಿಲು, ಹಾಲ್ - ಕಿಚನ್ - ಬಾತ್ ರೂಂ ಇರುವ ಸುಸಜ್ಜಿತ ಮನೆ ತಿಮ್ಮಾರೆಡ್ಡಿ ಹಾಗೂ ಬಿಐಇಟಿ ಕಾಲೇಜ್ ಗೆ ಹತ್ತಿರ ಇದ್ದು, "ಮಹಾಮನೆ", ಆಂಜನೇಯ ಬಡಾವಣೆ 18ನೇ ಕ್ರಾಸ್, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ. ಮೆಡಿಕಲ್ ರೆಪ್, ಲೆಕ್ಚರರ್ ಗೆ ಆದ್ಯತೆ.
98452 16749

**ವಧು-ವರರ ಮಾಹಿತಿ ಕೇಂದ್ರ**
ನಮ್ಮಲ್ಲಿ ಎಲ್ಲಾ ಜಾತಿಯ ವಧು- ವರರಿಗಾಗಿ ಸಂಪರ್ಕಿಸಿ
ಶಶಿ ದಿನಪತ್ರಿಕೆ ಏಜೆನ್ಸೀಸ್
ಶಾಂತಿ ಪಾರ್ಕ್ ಪಕ್ಕ, ಅಶೋಕ ರಸ್ತೆ, ದಾವಣಗೆರೆ.
93808 33743
74830 88761

**ಬೇಕಾಗಿದ್ದಾರೆ**
ಟ್ಯಾಲಿ, Exel, office ಗೊತ್ತಿರುವ ಮಹಿಳೆಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
99806 90329
93534 21181

**ಸೈಟು ಮಾರಾಟಕ್ಕಿದೆ**
25'x40' ಅಳತೆಯ ಜಯನಗರ ಚರ್ಚ್ ಹಿಂಭಾಗ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ:
97416 66288

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ ಅಂಗಡಿ ಲೀಜ್/ಬಾಡಿಗೆಗೆ ಇದೆ ವಿಚಾರಿಸಿ
89041 29928

**ಹೊಸ ಮನೆ ಮಾರಾಟಕ್ಕಿದೆ**
ದಾವಣಗೆರೆ ಎಸ್.ಎಸ್. ಆಸ್ಪತ್ರೆ ಹಿಂಭಾಗ ಸಿದ್ದಗಂಗಾ ಬಡಾವಣೆ (#141) 30x40, 2BHK, ಉತ್ತರ ದಿಕ್ಕಿನ ಹೊಸಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
96200 56056
99641 10489

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟೆರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**ಖಾಲಿ ನಿವೇಶನ ಮಾರಾಟಕ್ಕಿದೆ**
ದಾವಣಗೆರೆ GMIT ಕಾಲೇಜು ಪಕ್ಕ 54x51 ಅಳತೆಯ (ಪೂರ್ವ) ಸೈಟ್ ನಂ.7 ಖಾಲಿ ನಿವೇಶನ ಮಾರಾಟಕ್ಕೆ.
ಸಂಪರ್ಕಿಸಿ:
98863 89487
97407 70640

**WANTED**
Teaching Faculty
AUTO CAD
2D & 3D
96207 28832

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸಸ್ಯಹಾರಿ ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ
90084 66409

**FAILED & REGULAR COACHING**
for SSLC & IInd PUC
PCMB, Commerce, Arts
SINCHANA ACADEMY
Near SBI ATM, Ram & co Circle, Davangere.
85532 78258 90195 80600

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಮನೆ ಬಾಡಿಗೆಗಿದೆ**
ಫಸ್ಟ್ ಫ್ಲೋರ್‌ನಲ್ಲಿ 2 BHK, ಮುನ್ಸಿಪಲ್ ಮತ್ತು ಬೋರ್ ನೀರಿನ ವ್ಯವಸ್ಥೆ ಇರುವ ಮನೆ (#1926A/3) ವಿದ್ಯಾನಗರ, 1st ಬಸ್ ಸ್ಟಾಪ್, ಸಿಸಿಡಿ ಹಿಂಭಾಗ ಬಾಡಿಗೆಗಿದೆ. ಸಂಪರ್ಕಿಸಿ:
99019 03072

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ಮನೆ ಬಾಡಿಗೆಗೆ ಇದೆ**
#1928/63A, ಎಸ್.ಎಸ್. ಲೇಔಟ್, ಎ ಬ್ಲಾಕ್, ಎಂ.ಬಿ.ಎ. ಕಾಲೇಜ್ ಹತ್ತಿರ, 1ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
70227 94155

**ಜಾಗ ನೆಲ ಬಾಡಿಗೆಗೆ ಇದೆ**
150x150 ಅಳತೆಯ ಜಾಗ ಎಲೆಬೇತೂರು ಗ್ರಾಮದಲ್ಲಿ ನೆಲ ಬಾಡಿಗೆಗೆ ಇದೆ.
7829311731
9686421010

**ಬೇಕಾಗಿದ್ದಾರೆ**
ಕೆಲಸ ಬೇಕಾ.com
ಮರ್ಚೆಂಟ್ ನೇವಿಯಲ್ಲಿ ಕೆಲಸ ಮಾಡಲು ಆಸಕ್ತ ಯುವಕ-ಯುವತಿಯರು ಬೇಕಾಗಿದ್ದಾರೆ.
ವಯಸ್ಸು : 18 ರಿಂದ 25 ವರ್ಷ
ಸಂಬಳ : ತಿಂಗಳಿಗೆ 1 ಲಕ್ಷದವರೆಗೆ
96869 58555, 77609 55550

**ರೂಂಗಳು ಬಾಡಿಗೆಗಿವೆ**
ಅಟ್ಯಾಚ್ ಬಾತ್‌ರೂಂವುಳ್ಳ, ಸುಸಜ್ಜಿತ ರೂಂಗಳು ಬಾಡಿಗೆಗೆ ಲಭ್ಯವಿವೆ. ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ಮಾತ್ರ.
ಜೀವ ಆಯುರ್ವೇದ, ಆಂಜನೇಯ ಬಡಾವಣೆ, 13ನೇ ಕ್ರಾಸ್, ದಾವಣಗೆರೆ.
97413 01391
77605 55877

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**WANTED**
Boys Required for Sales Executive Post Leading Electronics Small home appliances Attractive Salary & Incentives. Please attend with Resume
Contact : 82963 92991
Balaji Enterprises, Davangere.

**ಹೆಸರು ಸ್ಪಷ್ಟೀಕರಣ**
ನಾನು ಶ್ರೀ ಮಲ್ಲಿಕಾರ್ಜುನ್ ಬಿ.ವೈ. ಬಿನ್ ಬಸವರಾಜಪ್ಪ, 50 ವರ್ಷ ಬೀರಗೊಂಡನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು ವಾಸಿಯಾದ ನಾನು ನನ್ನ ಪಡಿತರ ಚೀಟಿಯಲ್ಲಿ ನನ್ನ ಹೆಸರು ಬಿ.ವೈ. ಮಲ್ಲಿಕಾರ್ಜುನಪ್ಪ ಎಂದಾಗಿದ್ದು, ಗುರುತಿನ ಚೀಟಿಯಲ್ಲಿ ಬಿ.ವೈ. ಮಲ್ಲಿಕಾರ್ಜುನ ಎಂದು SSLC ಅಂಕಪಟ್ಟಿಯಲ್ಲಿ ಬಿ.ವೈ. ಮಲ್ಲಿಕಾರ್ಜುನಪ್ಪ ಎಂದಾಗಿದ್ದು ಈ ಮೇಲ್ಕಂಡ ಎಲ್ಲಾ ಹೆಸರುಗಳು ನನ್ನದೇ ಆಗಿದ್ದು, ಇನ್ನು ಮುಂದೆ ನನ್ನ ಹೆಸರನ್ನು ಮಲ್ಲಿಕಾರ್ಜುನ್ ಬಿ.ವೈ ಎಂದು ಮುಂದುವರಿಸಿ ಕೊಂಡು ಹೋಗುತ್ತೇನೆ ಹಾಗೂ ನನ್ನ ಎಲ್ಲಾ ದಾಖಲಾತಿಗಳಲ್ಲಿ ಈ ಕೆಳಕಂಡ ಸಹಿಯಂತೆ ಇರುತ್ತದೆ ಎಂದು ದಿನಾಂಕ 4.02.2021ರಂದು ನೋಟರಿಯವರ ಮುಂದೆ ಪ್ರಮಾಣೀಕರಿಸಿದ್ದೇನೆ.
ಸಹಿ/- ಬಿ.ವೈ. ಮಲ್ಲಿಕಾರ್ಜುನ್

**ಬೇಕಾಗಿದ್ದಾರೆ**
ಮಹಿಳಾ ಕಂಪ್ಯೂಟರ್ ಆಪರೇಟರ್ ಕಮ್ ಆಫೀಸ್ ವರ್ಕ್.
ಸಂಪರ್ಕಿಸಿರಿ :
ಬಿ.ಎಲ್. ಕರೆಸ್ಪಾಂಡೆನ್ಸ್ ಕಾಲೇಜ್
95351 14063
9620371544

**SAHYADRI PARAMEDICAL COLLEGE**
SSLC ಪಾಸ್, PUC ಪಾಸ್/ಫೇಲ್
Course DHI
Diploma Health Inspector
ಕೆಲವೇ ಸೀಟುಗಳು ಮಾತ್ರ, SBI ATM ಹತ್ತಿರ ರಾಂ & ಕೋ. ಸರ್ಕಲ್, ದಾವಣಗೆರೆ.
(ಕೊನೆಯ ದಿನಾಂಕ : 10.2.2021)
90195 80600, 86601 95955

**ಕೆಲಸ ಖಾಲಿ ಇದೆ**
ವಿದ್ಯುತ್ ಗೃಹ ಉಪಕರಣಗಳ ದುರಸ್ತಿಯಲ್ಲಿ (Home Appliance) ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ, ಬೇರೆ ಊರಿನಿಂದ ಬರುವ ಅಭ್ಯರ್ಥಿಗಳಿದ್ದಲ್ಲಿ ಪ್ರಯಾಣದ ವೆಚ್ಚವನ್ನು ಪ್ರತ್ಯೇಕವಾಗಿ ಭರಿಸಲಾಗುವುದು. ಆಕರ್ಷಕ ವೇತನ. ಸಂಪರ್ಕಿಸಿ:
ವಿಕಾಸ್ ಎಂಟರ್‌ಪ್ರೈಸಸ್
ಸಿ.ಆರ್. ಆರ್. ಕಾಂಪ್ಲೆಕ್ಸ್, ಮಹಿಳಾ ಸಮಾಜ ರಸ್ತೆ, ದಾವಣಗೆರೆ.
94483 18997, 95355 12497

**FOR RENT**
41x100 for showroom Premises
Near Reliance Market, P.B. Road, Davangere.
94492 39097
98449 05070

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davangere.
77603 16576
90080 55813

**SBI Bank**
ಗ್ರಾಹಕರ ಸೇವಾ ಕೇಂದ್ರದಲ್ಲಿ
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**HIRING FOR A PRESTIGIOUS INSTITUTION**
10 - SECURITY GUARDS
Rs. 10,000/-
Qualification : Min. 10th
02 - SECURITY SUPERVISORS
Rs. 15,000/-
5 Yrs. Experience, Min. 12th Std.
G M I T CAMPUS DAVANGERE
91411 58731
99722 11111

**Sanjeevini Institute of Nursing & Paramedical Davanagere**
GNM, DMLT, DOTT, DHI, BSCMLT, M.Sc MLT
08192-220611
97430 73102

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**WANTED**
Sales Manager. B.A./B.Com/Diploma. Tally, Basic Computer Knowledge.
Walk-in with Resume to
Agadi Track & Trail
Murughrajendra Complex, Hadadi Road.

**JOB Vacancy**
Graphic Designer Male/Female Knowledging in Corel Draw & Photoshop Salary on Experience Basis
Imax Prints
Near Shivappaiah Circle. DVG
Call : 88923 30095

**TO-LET**
1) Shop & 2 BHK House - Ground Floor ideal for Doctor Consultation for Rent at P J Extension near Church
2) 2 BHK House, 2nd Floor Available for Rent/Lease at same place
Contact: 9591823706

**JOBS**
MCS ACADEMY
Training & Placement Cell
98444 92888

**ATTENTION**
WORK FROM HOME PART TIME/ FULL TIME-LOW COST STARATUP BE YOUR OWN BOSS!!
Call: 79751 41486

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## ಮಲೇಬೆನ್ನೂರು ನೀರಾವರಿ ಕಛೇರಿ ಸ್ಥಳಾಂತರಿಸದಂತೆ ನಿಗಮಕ್ಕೆ ಮನವಿ



ಬೆಂಗಳೂರು, ಫೆ.5 - ಹರಿಹರ ತಾಲ್ಲೂಕಿನ ಮಲೇಬೆನ್ನೂರು ನಲ್ಲಿರುವ ಕರ್ನಾಟಕ ನೀರಾವರಿ ನಿಗಮದ ಭದ್ರಾ ನಾಲಾ ನಂ-3 ವಿಭಾಗದ ಕಾರ್ಯಪಾಲಕ ಅಭಿಯಂತರರ ಕಛೇರಿಯನ್ನು ಯಾವುದೇ ಕಾರಣಕ್ಕೂ ಹೊನ್ನಾಳಿಗೆ ವರ್ಗಾವಣೆ ಮಾಡಬೇಡಿ ಎಂದು ಶಾಸಕ ಎಸ್.ರಾಮಪ್ಪ ಅವರು ಶುಕ್ರವಾರ ಬೆಂಗಳೂರಿನಲ್ಲಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿ ಮನವಿ ಪತ್ರ ನೀಡಿದರು.

ಬಸವಾಪಟ್ಟಣ ಉಪ ವಿಭಾಗೀಯ ಕಛೇರಿಯನ್ನು ಸಾಸ್ವೆಹಳ್ಳಿ ಉಪವಿಭಾಗಕ್ಕೆ ವಿಲೀನಗೊಳಿಸುವ ವಿಷಯವನ್ನು ತಕ್ಷಣವೇ ಕೈ ಬಿಡಬೇಕು. ಈ ಕಛೇರಿಯನ್ನು ಬೇರೆಡೆಗೆ ವರ್ಗಾಯಿಸುವುದರಿಂದ ಮತ್ತು ಬಸವಾಪಟ್ಟಣ ಎಇಇ ಕಛೇರಿಯನ್ನು ಸಾಸ್ವೆಹಳ್ಳಿಗೆ ಸೇರಿಸುದರಿಂದ ಕೊನೆ ಭಾಗದ ರೈತರಿಗೆ ಬಹಳ ತೊಂದರೆ ಆಗುತ್ತದೆ ಎಂಬ ವಿಷಯವನ್ನು ಶಾಸಕ ರಾಮಪ್ಪ ಅವರು ನೀರಾವರಿ ನಿಗಮದ ಎಂಡಿ ಮಲ್ಲಿಕಾರ್ಜುನ್ ಗುಗ್ಗೆ ಅವರಿಗೆ ತಿಳಿಸಿ ಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ಸ್ಪಂದಿಸಿದ ಎಂಡಿ ಅವರು ಇಂತಹ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸ್ಥಳೀಯ ಅಭಿಪ್ರಾಯ ಪಡೆಯುತ್ತೇವೆ. ಈ ವಿಷಯ ಕುರಿತು ಕೂಡಲೇ ಯಾವುದೇ ನಿರ್ಧಾರ ಕೈಗೊಳ್ಳುವುದಿಲ್ಲ ಎಂದು ಶಾಸಕರಿಗೆ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

## ಐರಣಿ ಅವರಿಗೆ ಪ್ರಶಸ್ತಿ : ಬಾಮ ಅಭಿನಂದನೆ



ದಾವಣಗೆರೆ,ಫೆ.5-ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ಹಿರಿಯ ರಂಗಭೂಮಿ ಕಲಾವಿದ ಬಸವರಾಜ ಐರಣಿ ಅವರನ್ನು ಹಿರಿಯ ಸಾಹಿತಿ ಬಾ.ಮ. ಬಸವರಾಜಯ್ಯ ಅಭಿನಂದಿಸಿದ್ದಾರೆ.

ರಂಗಭೂಮಿ ಮಾತ್ರವಲ್ಲದೇ, ಪತ್ರಿಕಾ ಕ್ಷೇತ್ರದೊಂದಿಗೆ ನಾಡು - ನುಡಿಗಾಗಿ ಅನೇಕ ಹೋರಾಟಗಳನ್ನು ನಡೆಸುತ್ತಿರುವ ಐರಣಿ ಅವರು ಸಲ್ಲಿಸುತ್ತಿರುವ ಅನುಪಮ ಸೇವೆಗಾಗಿ ಅಕಾಡೆಮಿಯು ತಡವಾಗಿಯಾದರೂ ಪ್ರಶಸ್ತಿ ನೀಡಿರುವುದು ಸಂತಸದ ವಿಷಯ ಎಂದು ಬಾ.ಮ. ತಿಳಿಸಿದ್ದಾರೆ.

# ಒಂದೇ ಒಂದು ಲೋಪ ತೋರಿಸಲು ಸಾಧ್ಯವಾಗಿಲ್ಲ

## ಕೃಷಿ ಕಾಯ್ದೆ ವಿರೋಧಿಸುವ ಪ್ರತಿಭಟನಾಕಾರರು, ಪ್ರತಿಪಕ್ಷಗಳಿಗೆ ತಿರುಗೇಟು ನೀಡಿದ ಸಚಿವ ತೋಮರ್

ನವದೆಹಲಿ, ಫೆ. 5 – ನೂತನ ಕೃಷಿ ಕಾಯ್ದೆಗಳಲ್ಲಿ ಒಂದೇ ಒಂದು ಲೋಪವನ್ನು ಹುಡುಕಲು ಪ್ರತಿಪಕ್ಷಗಳಿಗೆ ಸಾಧ್ಯವಾಗಿಲ್ಲ ಎಂದಿರುವ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ಕೇವಲ ಒಂದು ರಾಜ್ಯದ ರೈತರು ಮಾತ್ರ ಪ್ರಚೋದನೆ ಹಾಗೂ ತಪ್ಪು ಮಾಹಿತಿಯಿಂದ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದಿದ್ದಾರೆ.

ಸರ್ಕಾರ ಕಾಯ್ದೆಗಳಿಗೆ ತಿದ್ದುಪಡಿ ತರಲು ಸಿದ್ಧವಿದೆ ಎಂದು ರೈತರಿಗೆ ಭರವಸೆ ನೀಡಿದ್ದರ ಅರ್ಥ ಕಾಯ್ದೆಯಲ್ಲಿ ಲೋಪಗಳಿವೆ ಎಂದಲ್ಲ. ಇದುವರೆಗೂ ಪ್ರತಿಭಟನಾ ನಿರತ ರೈತ ಸಂಘಟನೆಗಳಾಗಲೀ ಅವರಿಗೆ ಬೆಂಬಲಿಸುತ್ತಿರುವವರಾಗಲೀ ಯಾವುದೇ ಲೋಪ ಹುಡುಕಲು ಸಾಧ್ಯವಾಗಿಲ್ಲ ಎಂದು ತೋಮರ್ ಹೇಳಿದ್ದಾರೆ.

ಕಾಂಗ್ರೆಸ್ ಇತ್ತೀಚೆಗೆ ಬಿಡುಗಡೆ ಮಾಡಿದ್ದ ಕಿರುಹೊತ್ತಿಗೆಯನ್ನು ಪರೋಕ್ಷವಾಗಿ ಪ್ರಸ್ತಾಪಿಸಿ ಮಾತನಾಡಿದ ತೋಮರ್, 'ದುನಿಯಾ ಜಾನ್ತಿ ಹೈ ಪಾನಿ ಸೆ ಖೇತಿ ಹೋತಿ ಹೈ. ಖೂನ್ ಸೆ ಖೇತಿ ಸಿರ್ಫ್ ಕಾಂಗ್ರೆಸ್ ಹಿ ಕರ್ ಸಕ್ತಿ ಹೈ, ಬಿಜೆಪಿ ಖೂನ್ ಸೇ ಖೇತಿ ನಹಿ ಕರ್ತಿ' (ನೀರಿನಿಂದ ಬೇಸಾಯ ಆಗುತ್ತದೆ ಎಂಬುದು ಇಡೀ ಪ್ರಪಂಚಕ್ಕೆ ಗೊತ್ತಿದೆ. ಕಾಂಗ್ರೆಸ್ ಮಾತ್ರ ರಕ್ತದಿಂದ ಬೇಸಾಯ ಮಾಡಬಹುದು, ಬಿಜೆಪಿ ರಕ್ತದಿಂದ ಬೇಸಾಯ ಮಾಡುವುದಿಲ್ಲ) ಎಂದು ಹೇಳಿದರು. ಪ್ರತಿಪಕ್ಷಗಳು ಕೃಷಿ ಕಾಯ್ದೆಗಳನ್ನು ಟೀಕಿಸಿ ಇದು ಕರಾಳ ಕಾಯ್ದೆ ಎಂದು ಹೇಳುತ್ತಿವೆ. ಎರಡು ತಿಂಗಳಿನಿಂದ ನಾನು ರೈತ ಸಂಘಟನೆಗಳನ್ನು ಕೇಳುತ್ತಲೇ ಇದ್ದೇನೆ, 'ಕರಾಳತೆ ಏನಿದೆ' ಎಂದು. ಆದರೆ, ನನಗೆ ಉತ್ತರ ಸಿಕ್ಕಿಲ್ಲ. ಪ್ರತಿಪಕ್ಷಗಳೂ ಸಹ ಕಾಯ್ದೆಗಳಲ್ಲಿ ರೈತರ ವಿರುದ್ಧ ಏನಿದೆ ಎಂಬುದನ್ನು ತಿಳಿಸಿಲ್ಲ ಎಂದು ತೋಮರ್ ತಿಳಿಸಿದ್ದಾರೆ.

ತೋಮರ್ ಹಾಗೂ ಇತರ ಇಬ್ಬರು ಕೇಂದ್ರ ಸಚಿವರು ರೈತರ ಜೊತೆ 11 ಸಭೆಗಳನ್ನು ನಡೆಸಿದ್ದಾರೆ. ಕಾಯ್ದೆಗಳಲ್ಲಿ ಲೋಪವಿದ್ದರೆ ತಿದ್ದುಪಡಿ ತರುವುದಾಗಿ ಹಾಗೂ ಕಾಯ್ದೆ ಕುರಿತು ಚರ್ಚೆಗೆ ಬರುವಂತೆ ಸರ್ಕಾರ ತಿಳಿಸಿದೆ. ಆದರೆ, ಚರ್ಚೆಗೆ ಒಪ್ಪದ ರೈತರು, ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಪಟ್ಟು ಹಿಡಿದಿದ್ದಾರೆ.

ರೈತರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ. ಕನಿಷ್ಠ ಬೆಂಬಲ ಬೆಲೆ ಮೂಲಕ ಮಂಡಿ ವ್ಯವಸ್ಥೆಯಲ್ಲಿ ಆಹಾರ ಧಾನ್ಯ ಪಡೆಯುವುದನ್ನು ಮುಂದುವರೆಸಲಾಗುವುದು ಎಂದು ಅವರು ಭರವಸೆ ನೀಡಿದ್ದಾರೆ.

ಈ ಕಾನೂನುಗಳ ಮೂಲಕ ಮಂಡಿ ವ್ಯವಸ್ಥೆ ಹೊರಗೂ ಕೃಷಿಕರು ಇಳುವರಿ ಮಾರಾಟ ಮಾಡಲು ಅವಕಾಶ ನೀಡಲಾಗುವುದು. ರಾಜ್ಯಗಳು ನಿಗದಿ ಪಡಿಸಿರುವ ಮಾರುಕಟ್ಟೆಯ ರೀತಿಯಲ್ಲಿ ಇಲ್ಲಿ ತೆರಿಗೆ ಪಾವತಿಸುವ ಅಗತ್ಯವಿರುವುದಿಲ್ಲ ಎಂದು ತೋಮರ್ ಹೇಳಿದ್ದಾರೆ.

ಹಾಗೆ ನೋಡಿದರೆ ಪ್ರತಿಭಟನಾ ನಿರತರು ರಾಜ್ಯ ಸರ್ಕಾರದ ಮಂಡಿಗಳಲ್ಲಿ ತೆರಿಗೆ ವಿಧಿಸುವುದರ ವಿರುದ್ಧವಾಗಿರಬೇಕಿತ್ತು. ವಿಚಿತ್ರವೆಂದರೆ ಪ್ರತಿಭಟನಾಕಾರರು ತೆರಿಗೆ ಮುಕ್ತಗೊಳಿಸುವುದಕ್ಕೆ ವಿರುದ್ಧವಾಗಿದ್ದಾರೆ ಎಂದು ತೋಮರ್ ತಿಳಿಸಿದ್ದಾರೆ.ರಾಷ್ಟ್ರಪತಿ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ನಿಲುವಳಿ ಕುರಿತು ರಾಜ್ಯ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಅವರು ಮಾತನಾಡುತ್ತಿದ್ದರು.

ಸರ್ಕಾರ ರೂಪಿಸಿರುವ ಗುತ್ತಿಗೆ ಕೃಷಿ ಕಾಯ್ದೆಯಿಂದ ರೈತರು ತೆರಿಗೆ ಪಾವತಿಸುವುದರಿಂದ ಮುಕ್ತವಾಗಲಿದ್ದಾರೆ. ಅಲ್ಲದೇ ಒಪ್ಪಂದದಿಂದ ಹೊರ ಬರಲು ಮುಕ್ತವಾಗಿದ್ದಾರೆ. ಮತ್ತೊಂದೆಡೆ ಪಂಜಾಬ್ ರೂಪಿಸಿರುವ ಗುತ್ತಿಗೆ ಕಾಯ್ದೆಯಲ್ಲಿ ಒಪ್ಪಂದ ಉಲ್ಲಂಘಿಸುವ ರೈತರನ್ನು ಜೈಲಿಗೆ ಕಳಿಸಬಹುದಾಗಿದೆ, ಇಲ್ಲವೇ ಐದು ಲಕ್ಷ ರೂ.ಗಳವರೆಗೂ ದಂಡ ವಿಧಿಸಬಹುದಾಗಿದೆ ಎಂದು ತೋಮರ್ ಗಮನ ಸೆಳೆದರು.

ನಾವು ರೈತರನ್ನು ತೆರಿಗೆ, ರಾಜ್ಯ ಸರ್ಕಾರದ ಲೆವಿಗಳಿಂದ ಮುಕ್ತಗೊಳಿಸಿದ್ದೇವೆ. ಹೀಗಿರುವಾಗ ತೆರಿಗೆ ವಿಧಿಸುವವರ ವಿರುದ್ಧ ಪ್ರತಿಭಟನೆ ನಡೆಸಬೇಕೇ ಅಥವಾ ತೆರಿಗೆ ಮುಕ್ತಗೊಳಿಸುವವರ ವಿರುದ್ಧವೇ? ಈ ಪ್ರಶ್ನೆಯನ್ನು ನಾನು ವಿಶೇಷವಾಗಿ ಪಂಜಾಬ್‌ನ ರೈತರಿಗೆ ಕೇಳಲು ಬಯಸುತ್ತೇನೆ ಎಂದವರು ಹೇಳಿದ್ದಾರೆ.

'ಲೇಕಿನ್ ದೇಶ್ ಮೇ ಉಲ್ಟಿ ಗಂಗಾ ಬೆಹ್ ರಹಿ ಹೈ' (ಆದರೆ, ದೇಶ ಈಗ ಉಲ್ಟಾ ದಿಕ್ಕಿಗೆ ಸಾಗುತ್ತಿದೆ) ಎಂದವರು ಲೇವಡಿ ಮಾಡಿದರು.

ಕೃಷಿ ಇಳುವರಿ ವ್ಯಾಪಾರದ ನೂತನ ಕಾಯ್ದೆಯಿಂದಾಗಿ ರೈತರು ತಮ್ಮ ಇಳುವರಿಯನ್ನು ಮಂಡಿಗಳ ಹೊರಗೆ ತಮ್ಮ ಮನೆಗಳು, ಗೋದಾಮು ಹಾಗೂ ಜಮೀನಿನಲ್ಲೇ ಮಾರಾಟ ಮಾಡಬಹುದು. ಇದಕ್ಕೆ ಯಾವುದೇ ರಾಜ್ಯ ಇಲ್ಲವೇ ಕೇಂದ್ರದ ತೆರಿಗೆ ಇರುವುದಿಲ್ಲ ಎಂದು ಸಚಿವರು ಹೇಳಿದ್ದಾರೆ.

### ಕೇಂದ್ರ ಕೃಷಿ ಸಚಿವರ ನುಡಿ

**ರಾಜ್ಯಗಳ ಎಪಿಎಂಸಿಗಳಲ್ಲಿ ಕೃಷಿ ಉತ್ಪನ್ನ ಮಾರಿದರೆ ತೆರಿಗೆ, ಕೇಂದ್ರದ ಕಾಯ್ದೆಗಳಲ್ಲಿ ಹೊರಗೆ ಮಾರಿದರೆ ತೆರಿಗೆ ಮುಕ್ತ.**

**ಎಪಿಎಂಸಿಗಳಲ್ಲಿ ತೆರಿಗೆ ಹೇರುವ ರಾಜ್ಯಗಳ ವಿರುದ್ಧ ಪ್ರತಿಭಟನೆ ನಡೆಸಿ, ಕೇಂದ್ರದ ವಿರುದ್ಧವಲ್ಲ.**

**ಪಂಜಾಬ್ ಕಾಯ್ದೆಯಲ್ಲಿ ಒಪ್ಪಂದ ಉಲ್ಲಂಘಿಸುವವರಿಗೆ ಜೈಲು - ದಂಡ, ಕೇಂದ್ರದ ಕಾಯ್ದೆಯಲ್ಲಿ ರೈತರು ಒಪ್ಪಂದದಿಂದ ಮುಕ್ತ.**



**ಮೊಳೆಗಳ ನಡುವೆ ಸಸಿ: ನವದೆಹಲಿಯ ಘಾಜಿಪುರ ಗಡಿಯಲ್ಲಿ ಪೊಲೀಸರು ಅಳವಡಿಸಿರುವ ಮೊಳೆಗಳ ಬಳಿ ರೈತರು ಸಸಿಗಳನ್ನು ನೆಡುತ್ತಿದ್ದಾರೆ. ರೈತರ ಪ್ರತಿಭಟನೆ ತಡೆಯಲು ಪೊಲೀಸರು ರಸ್ತೆಗಳಲ್ಲಿ ಮೊಳೆಗಳನ್ನು ನೆಟ್ಟಿದ್ದರು**

ಎ.ಪಿ.ಎಂ.ಸಿ. ಮಂಡಿಗಳ ಒಳಗೆ ವಿಧಿಸುವ ರಾಜ್ಯಗಳ ಲೆವೀಗಳೂ ಸಹ ಇರುವುದಿಲ್ಲ. ಕೇಂದ್ರ ಸರ್ಕಾರದ ಕಾಯ್ದೆ ಮಂಡಿಗಳ ಹೊರಗೆ ಅನ್ವಯವಾಗಲಿದ್ದು, ಅಲ್ಲಿ ಯಾವುದೇ ತೆರಿಗೆ ಇರುವುದಿಲ್ಲ ಎಂದವರು ಸ್ಪಷ್ಟಪಡಿಸಿದರು.

ನೂತನ ಕಾಯ್ದೆಗಳ ಮೂಲಕ ರೈತರ ಜಮೀನು ಜಪ್ತಿ ಮಾಡಿಕೊಳ್ಳಲಾಗುತ್ತದೆ ಎಂಬ ಅಪಪ್ರಚಾರ ನಡೆಸಲಾಗುತ್ತಿದೆ. ಆ ರೀತಿಯ ಒಂದೇ ಒಂದು ಅಂಶವನ್ನು ದಯವಿಟ್ಟು ನನಗೆ ತೋರಿಸಿ ಎಂದು ಪ್ರತಿಪಕ್ಷಗಳಿಗೆ ಕೇಳಿದ ತೋಮರ್, ಆದರೂ, ರೈತರನ್ನು ಪ್ರಚೋದಿಸಲಾಗುತ್ತಿದೆ ಎಂದಿದ್ದಾರೆ.

ಈ ಕೃಷಿ ಕಾಯ್ದೆಗಳು ರೈತರ ಆದಾಯ ದುಪ್ಪಟ್ಟುಗೊಳಿಸುವ ಗುರಿಯತ್ತ ಪ್ರಮುಖ ಹೆಜ್ಜೆಗಳಾಗಿವೆ. ಈ ಶಾಸನಗಳಿಂದ ರೈತರ ಜೀವನದಲ್ಲಿ ಕ್ರಾಂತಿಕಾರರ ಬದಲಾವಣೆಯಾಗಲಿದೆ ಹಾಗೂ ಅವರ ಆದಾಯ ಹೆಚ್ಚಾಗಲಿದೆ ಎಂದು ಸಚಿವ ತೋಮರ್ ಸಮರ್ಥಿಸಿಕೊಂಡಿದ್ದಾರೆ.

## ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಗೆ ಎಸ್‌ಯುಸಿಐ ಪ್ರತಿಭಟನೆ



ದಾವಣಗೆರೆ, ಫೆ.5- ಪೆಟ್ರೋಲ್, ಡೀಸೆಲ್, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ನಗರದಲ್ಲಿಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಷ್ಟ್) ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಗಾಂಧಿ ವೃತ್ತದಲ್ಲಿ ಜಮಾಯಿಸಿದ್ದ ಎಸ್‌ಯುಸಿಐ ಪದಾಧಿಕಾರಿಗಳು, ಕೇಂದ್ರ ಸರ್ಕಾರದ ಪ್ರತಿಕೃತಿ ದಹನ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ರಾಜ್ಯ ಸಮಿತಿ ಸದಸ್ಯೆ ಬಿ.ಆರ್. ಅಪರ್ಣ ಮಾತನಾಡಿ, ಕೊರೊನಾ ವೈರಸ್‌ನಿಂದ ಸಂಕಷ್ಟವನ್ನು ಎದುರಿಸಿದ ಜನರಿಗೆ ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುವುದರ ಮೂಲಕ ಶ್ರೀಮಂತರ ಪರವಾದ ಬಜೆಟ್ ಮಂಡಿಸಿದೆ. ಕೇಂದ್ರ ಬಜೆಟ್‌ನಲ್ಲಿ ಹೆಚ್ಚಾಗುತ್ತಿರುವ ನಿರುದ್ಯೋಗ, ಕೈಗಾರಿಕೆಗಳ ಮುಚ್ಚುವಿಕೆ, ಘಾಸಿಗೊಳಿಸುವ ಬೆಲೆ ಏರಿಕೆ, ರೈತರಿಗೆ ಬೆಂಬಲ ಬೆಲೆ ಇಂತಹ ಸಮಸ್ಯೆಗಳನ್ನು ನೋಡಿಲ್ಲ. ಜಿಗುಪ್ಸೆ ಹುಟ್ಟಿಸುವ, ಆರ್ಥಿಕ ಪುನಶ್ಚೇತನ ಹುಸಿ ಪ್ರತಿಪಾದನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು ಟೀಕಿಸಿದರು.

ಆತ್ಮ ನಿರ್ಭರ ಭಾರತ ನಿರ್ಮಿಸುವ ಹೆಸರಿನಲ್ಲಿ ಶಿಕ್ಷಣ, ಆರೋಗ್ಯ, ಬ್ಯಾಂಕಿಂಗ್, ವಿಮೆ ಮುಂತಾದ ಸಮಾಜ ಕಲ್ಯಾಣ ಮತ್ತು ಸೇವಾ ಕ್ಷೇತ್ರಗಳು ಒಳಗೊಂಡಂತೆ ಎಲ್ಲ ರಂಗಗಳ ವೇಗವಾದ, ಸಂಪೂರ್ಣ ಖಾಸಗೀಕರಣದ ನೀಲಿ ನಕ್ಷೆಯನ್ನು ಬಿಚ್ಚಿಡಲಾಗಿದೆ ಎಂದು ಆರೋಪಿಸಿದರು.

ಜಿಲ್ಲಾ ಕಾರ್ಯದರ್ಶಿ ಮಂಜುನಾಥ ಕೈದಾಳೆ ಮಾತನಾಡಿ, ಮೂರು ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡಲಾಗುತ್ತಿದೆ. ಕೋವಿಡ್ ಸಂದರ್ಭದಲ್ಲೂ ಕಾರ್ಪೊರೇಟ್ ಬಂಡವಾಳಶಾಹಿಗಳು ತಮ್ಮ ಸಂಪತ್ತನ್ನು ಹಲವು ಪಟ್ಟು ಹೆಚ್ಚಿಸಿಕೊಂಡಿದ್ದಾರೆ. ಆತ್ಮನಿರ್ಭರ್ ಭಾರತ ಎಂಬುದು ವಾಸ್ತವದಲ್ಲಿ ಕಾರ್ಪೊರೇಟ್ ಅವಲಂಬಿತ ಭಾರತ ಎಂಬ ಪದಕ್ಕೆ ಪರ್ಯಾಯವಾಗಿದೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ತಿಪ್ಪೇಸ್ವಾಮಿ, ಕೆ. ಭಾರತಿ, ಪುಷ್ಪ, ಕಾವ್ಯ, ಸ್ಮಿತಾ, ಜ್ಯೋತಿ, ಸೌಮ್ಯ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ಕೂಡ್ಲಿಗಿ : ಮೊರಬ ಗ್ರಾ.ಪಂ. ಕಾಂಗ್ರೆಸ್ ತೆಕ್ಕೆಗೆ



ಕೂಡ್ಲಿಗಿ, ಫೆ.5 - ತಾಲ್ಲೂಕಿನ ಮೊರಬ ಗ್ರಾಮ ಪಂಚಾಯ್ತಿ ಕಾಂಗ್ರೆಸ್ ಪಕ್ಷದ ಬೆಂಬಲಿತರ ಪಾಲಾಗಿದ್ದು ನೂತನ ಅಧ್ಯಕ್ಷರಾಗಿ ಮಹಾಭಾಷಾ ಉಪಾಧ್ಯಕ್ಷರಾಗಿ ವಿ.ದುರುಗಮ್ಮ ಗುರುವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೊರಬ ಗ್ರಾಮ ಪಂಚಾಯ್ತಿಯಲ್ಲಿ ಒಟ್ಟು 13 ಸದಸ್ಯರಿದ್ದು ಇವರಲ್ಲಿ ಗುರುವಾರ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ 12 ಸದಸ್ಯರು ಹಾಜರಾಗಿದ್ದು ಓರ್ವ ಸದಸ್ಯರು ಗೈರಾಗಿದ್ದರು. ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಉಪಾಧ್ಯಕ್ಷ ಸ್ಥಾನ ಎಸ್.ಸಿ.ಮಹಿಳೆಗೆ ಮೀಸಲಾಗಿತ್ತು. ಮೆಹಬೂಬ್ ಭಾಷಾ ಚುನಾವಣಾಧಿಕಾರಿದ್ದರು.

**ಸಂಭ್ರಮಾಚರಣೆ :** ಚುನಾವಣೆ ನಂತರ ನಡೆದ ಸಂಭ್ರಮಾಚರಣೆಯಲ್ಲಿ ಕೂಡ್ಲಿಗಿ ತಾಲ್ಲೂಕು ಕಾಂಗ್ರೆಸ್ ಮುಖಂಡ ವಿ.ಲೋಕೇಶ್ ನಾಯಕ, ಕೂಡ್ಲಿಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಗುರುಸಿದ್ದನಗೌಡ, ಕಾಂಗ್ರೆಸ್ ಮುಖಂಡರಾದ ಜಿ.ನಾಗಮಣಿ, ಸಣ್ಣ ಕೊತ್ಲಪ್ಪ, ಬಣಕಾರ ವೀರಭದ್ರಪ್ಪ, ಕೂಡ್ಲಿಗಿ ಪಟ್ಟಣ ಪಂಚಾಯ್ತಿ ಸದಸ್ಯರಾದ ಕಾವಲ್ಲಿ ಶಿವಪ್ಪನಾಯಕ, ಸೈಯ್ಯದ್ ಶುಕೂರ್ ಮತ್ತಿತರರು ಭಾಗವಹಿಸಿದ್ದರು.

## ಸಾರ್ವಜನಿಕ ಸ್ಥಳದಲ್ಲಿ ಓಡಾಡದಂತೆ ಕಿರುಕುಳ

ದಾವಣಗೆರೆ, ಫೆ.5- ಸಾರ್ವಜನಿಕವಾಗಿ ಓಡಾಡಲು ಇರುವ 10 ಅಡಿ ಜಾಗದಲ್ಲಿ ನಮ್ಮ ಮನೆಗೆ ನಾವು ಓಡಾಡಿದರೆ, ಮನೆಯ ಪಕ್ಕದಲ್ಲಿರುವ ವ್ಯಕ್ತಿಯೋರ್ವರು ಓಡಾಡದಂತೆ ತಡೆಯೊಡ್ಡುತ್ತಿದ್ದು, ಮಾನಸಿಕವಾಗಿ ಕಿರುಕುಳ ನೀಡುತ್ತಿರುವುದಾಗಿ ವಿನೋಬನಗರದ ಬಿ.ಕೆ. ರಂಗನಾಥ್ ಆರೋಪಿಸಿದ್ದಾರೆ.

ವಿನೋಬನಗರದ 4ನೇ ಮುಖ್ಯ ರಸ್ತೆಯಲ್ಲಿ ವಾಸವಿದ್ದು, ಮನೆಯ ಪಕ್ಕದಲ್ಲಿರುವ ಸಾರ್ವಜನಿಕ ಜಾಗದಲ್ಲೇ ನಾವು ಓಡಾಡಬೇಕಾಗಿದ್ದು, ಹಾಗೇನಾದರೂ ಓಡಾಡಿದರೆ ಅವಾಚ್ಯ ಶಬ್ದಗಳಿಂದ ನಿಂದಿಸುವುದಲ್ಲದೇ ವಿನಾಕಾರಣ ಗಲಾಟೆ ಮಾಡುತ್ತಿದ್ದಾರೆ. ಅವರ ಮನೆಯ ಪಕ್ಕದಲ್ಲಿರುವ ನಮ್ಮ ಜಾಗವನ್ನು ಪಡೆಯಲು ಹೀಗೆ ನಮಗೆ ಮಾನಸಿಕವಾಗಿ ಕಿರುಕುಳ ನೀಡಲಾಗುತ್ತಿದೆ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಅಳಲು ತೋಡಿಕೊಂಡರು. ನನಗಾಗಿರುವ ಸಮಸ್ಯೆ ಕುರಿತು ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೂ ತಂದಿದ್ದೇನೆ. ಬಡಾವಣೆ ಪೊಲೀಸ್ ಠಾಣೆಗೆ ದೂರು ನೀಡಿದ್ದೇನೆ. ಆದರೂ ಯಾವುದೇ ರೀತಿಯಲ್ಲಿ ಕ್ರಮ ತೆಗೆದುಕೊಂಡಿಲ್ಲ. ನನಗೆ ನ್ಯಾಯ ಸಿಗುತ್ತಿಲ್ಲ ಎಂದು ಅವರು ದೂರಿದರು.

## ರಾಜನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಚೈತ್ರ



ಮಲೇಬೆನ್ನೂರು, ಫೆ.5 - ರಾಜನಹಳ್ಳಿ ಗ್ರಾ.ಪಂ ಅಧ್ಯಕ್ಷರಾಗಿ ಶ್ರೀಮತಿ ಚೈತ್ರ ಲಂಕೇಶ್ ಮತ್ತು ಉಪಾಧ್ಯಕ್ಷರಾಗಿ ಹಲಸಬಾಳು ಗ್ರಾಮದ ಶ್ರೀಮತಿ ಗೀತಾ ಕುಮಾರಪ್ಪ ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕುಡಿಯುವ ನೀರು ಸರಬರಾಜು ಇಲಾಖೆಯ ಎಇಇ ಗಂಗಾಧರಪ್ಪ ಚುನಾವಣಾಧಿಕಾರಿಯಾಗಿದ್ದರು.

## ನಗರ ವಿವಿಧೆಡೆ ವಿದ್ಯುತ್ ವ್ಯತ್ಯಯ

ರೆಹಮಾನ್‌ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್‌ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್(ಬೇತೂರ್ ರಸ್ತೆ) ಸುತ್ತಮುತ್ತ ಸೇರಿದಂತೆ ಇತರೆ ಪ್ರದೇಶಗಳು, ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಕೆಆರ್‌ರಸ್ತೆ, ಗಡಿಯಾರ ಕಂಬ, ಬಿಟಿ ಗಲ್ಲಿ, ಇಸ್ಲಾಂಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್‌ಆಫೀಸ್, ವಿಜಯಲಕ್ಷ್ಮೀ ರಸ್ತೆ, ವಸಂತ ಟಾಕೀಸ್ ಸ್ವಲ್ಪಭಾಗ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ವಿದ್ಯುತ್ ವ್ಯತ್ಯಯವಾಗಲಿದೆ.

## ಜೆಜೆಎಂ ವೈದ್ಯಕೀಯ ಕಾಲೇಜಿಗೆ ದಾಖಲೆಯ 44 ರ್‍ಯಾಂಕ್

ದಾವಣಗೆರೆ, ಫೆ.5- ನಗರದ ಬಾಪೂಜಿ ವಿದ್ಯಾಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಜೆಜೆಎಂ ವೈದ್ಯಕೀಯ ಕಾಲೇಜಿಗೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದಿಂದ ಈ ಬಾರಿ 44 ರ್‍ಯಾಂಕ್ ಗಳು ಬಂದಿವೆ.

ಕಾಲೇಜಿನ ಇತಿಹಾಸದಲ್ಲಿ ಇದೊಂದು ದಾಖಲೆಯೇ ಸರಿ ಎಂದು ಪ್ರಾಂಶುಪಾಲ ಡಾ. ಎಸ್.ಬಿ.ಮುರುಗೇಶ್, ಆಡಳಿತಾಧಿಕಾರಿ ಸತ್ಯನಾರಾಯಣ್ ಸಂತಸ ವ್ಯಕ್ತಪಡಿಸಿದ್ದಾರೆ.

44 ರ್‍ಯಾಂಕ್ ಗಳ ಪೈಕಿ ಐದು ಮೊದಲ ರ್‍ಯಾಂಕ್‌ಗಳು ಹಾಗೂ ಐದು ಎರಡನೇ ರ್‍ಯಾಂಕ್‌ಗಳು ಸೇರಿವೆ. ವಿಶೇಷವೆಂದರೆ, ಪಿ.ಜಿ. ವೈದ್ಯ ವಿದ್ಯಾರ್ಥಿಗಳೇ 34 ರ್‍ಯಾಂಕುಗಳನ್ನು ಗಳಿಸಿ, ದಾಖಲೆ ಸ್ಥಾಪಿಸಿದ್ದಾರೆ. ಎಂಬಿಬಿಎಸ್ ವಿದ್ಯಾರ್ಥಿಗಳು ಹತ್ತು ರ್‍ಯಾಂಕ್‌ಗಳನ್ನು ಪಡೆದಿದ್ದಾರೆ.

ಇಷ್ಟೊಂದು ರ್‍ಯಾಂಕ್‌ಗಳು ಬರಲು ನಮ್ಮ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಸಿಗುತ್ತಿರುವ ಗುಣಮಟ್ಟದ ಶಿಕ್ಷಣವೇ ಕಾರಣ ಎಂದು ಪ್ರಾಂಶುಪಾಲರು ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ರ್‍ಯಾಂಕ್ ವಿಜೇತ ಪಿ.ಜಿ.ವೈದ್ಯರನ್ನು, ಪದವಿ ವೈದ್ಯ ವಿದ್ಯಾರ್ಥಿಗಳು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಹಾಗೂ ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಗೌರವ ಜಂಟಿ ಕಾರ್ಯದರ್ಶಿ ಎಸ್. ಎಸ್.ಮಲ್ಲಿಕಾರ್ಜುನ್ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಜೀವನ್ ಭೀಮಾನಗರ, ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ಜಯನಗರ ಎ ಮತ್ತು ಬಿ ಬ್ಲಾಕ್, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಸಾಯಿ ಬಾಬಾ ದೇವಸ್ಥಾನದ ಸುತ್ತಮುತ್ತ, ಲಕ್ಷ್ಮಿ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ವಿವೇಕಾನಂದ ಫೀಡರ್ ವ್ಯಾಪ್ತಿಯ ಸ್ವಾಮಿ ವಿವೇಕಾನಂದ ಬಡಾವಣೆ, ಆಂಜನೇಯ ಬಡಾವಣೆ 16, 17, 18 ಮತ್ತು 19 ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಪ್ಲಾಸ್ಟಿಕ್ ಬಳಕೆ ಅಂಗಡಿಗಳ ಮೇಲೆ ದಾಳಿ

**200 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶ, 11,700 ರೂ.ದಂಡ**

ದಾವಣಗೆರೆ, ಫೆ.5- ಕಾನೂನು ಬಾಹಿರ ಪ್ಲಾಸ್ಟಿಕ್ ಮಾರಾಟದ ಅಂಗಡಿಗಳ ಮೇಲೆ ನಗರ ಪಾಲಿಕೆಯ ಆರೋಗ್ಯ ಶಾಖೆ ಅಧಿಕಾರಿಗಳ ತಂಡ ಇಂದು ದಾಳಿ ನಡೆಸಿ, 200 ಕೆ.ಜಿ. ನಿಷೇಧಿತ ಪ್ಲಾಸ್ಟಿಕ್ ವಶಪಡಿಸಿಕೊಂಡಿದೆ.

ನಗರದ ಎಂ.ಜಿ. ರಸ್ತೆ, ಬಿ.ಟಿ. ಗಲ್ಲಿ, ವಿಜಯಲಕ್ಷ್ಮಿ ರಸ್ತೆ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಅನಧಿಕೃತ ಪ್ಲಾಸ್ಟಿಕ್ ಮಾರಾಟದ ಅಂಗಡಿಗಳ ಮೇಲೆ ನಡೆಸಿದ ದಾಳಿ ವೇಳೆ ಕಾನೂನು ಬಾಹಿರವಾಗಿ ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದ ಅಂಗಡಿಗಳಿಗೆ 11,700 ರೂ. ದಂಡ ವಿಧಿಸಲಾಗಿದೆ.

ನಗರದ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬಳಕೆ ಹಾಗೂ ಮಾರಾಟ ನಿಷೇಧ ಹೇರಲಾಗಿದೆ. ಆದರೂ ಕೆಲವರು ಕದ್ದು ಮುಚ್ಚಿ ಇನ್ನೂ ಮಾರಾಟ ಮಾಡುತ್ತಿರುವ ಹಿನ್ನೆಲೆಯಲ್ಲಿ ಕಾನೂನು ಮೀರುವವರಿಗೆ ಬಿಸಿ ಮುಟ್ಟಿಸಲಾಗಿದೆ.

ದಾಳಿ ವೇಳೆ ಆರೋಗ್ಯ ನಿರೀಕ್ಷಕರಾದ ಪ್ರಕಾಶ್, ನಿಖಿಲ್, ಮಧುಶ್ರೀ ಹಾಗೂ ಸಿಬ್ಬಂದಿ ಇದ್ದರು.

## ಗಾರ್ಮೆಂಟ್ಸ್ ಮಾರಾಟ ಪ್ರದರ್ಶನ

ದಾವಣಗೆರೆ, ಫೆ.5- ನಗರದ ತೊಗಟವೀರ ಸಮುದಾಯ ಭವನದಲ್ಲಿ ರೆಡಿಮೇಡ್ ಗಾರ್ಮೆಂಟ್ಸ್‌ನ ಮಾರಾಟ, ಪ್ರದರ್ಶನ ಆರಂಭವಾಗಿದೆ.

ಜೆಂಟ್ಸ್ ಮತ್ತು ಮಕ್ಕಳ ಉಡುಪುಗಳಿಂದ ಟೀ-ಶರ್ಟ್ಸ್, ಲೇಡಿಸ್ ಟಾಪ್, ಲೇಡಿಸ್ ಪ್ಯಾಂಟ್, ವೆಸ್ಟರ್ನ್ ಟಾಪ್, ಕುರ್ತಿ, ಲೇಡಿಸ್ ಪೈಜಾಮ್, ಪ್ಲಾಜೊ, ಲೋವರ್ ಇತ್ಯಾದಿಗಳು ಗಾರ್ಮೆಂಟ್ಸ್ 150 ರಿಂದ 350 ರೂ.ಗಳ ವರೆಗೆ ದರ ನಿಗದಿಪಡಿಸಲಾಗಿದೆ.

ಶೇ. 100 ಕಾಟನ್ ಸ್ಟ್ರೆಚ್, ಡಾಬಿ ಕಾಟನ್ ಸ್ಟ್ರೆಚ್, ಫಿಟ್ : ಕಂಫರ್ಟ್ ಫಿಟ್, ನ್ಯಾರೋ ಫಿಟ್, ಪೆನ್ಸಿಲ್ ಫಿಟ್, ರಿಲ್ಯಾಕ್ಸ್‌ಡ್ ಫಿಟ್, ಕ್ಯಾಷುಯಲ್, ಫಾರ್ಮಲ್ ಟ್ರೌಷರ್, ಶರ್ಟ್ಸ್ : ಫಾರ್ಮಲ್, ಆಫೀಸ್‌ವೇರ್, ಕ್ಯಾಶುಯಲ್, ಪಾರ್ಟಿವೇರ್, ಬ್ಯುಸಿನೆಸ್ ಕ್ಲಾಸ್, ಮಲ್ಟಿ ಬ್ರ್ಯಾಂಡೆಡ್ ಲೇಡಿಸ್ ಕುರ್ತೀಸ್, ಸೆಲ್ಫ್ ಚೂಸ್, ಇತರೆ 400 ರಿಂದ 999 ರೂ.ಗಳವರೆಗೆ ಮಾರಾಟಗೊಳ್ಳುತ್ತಿವೆ. ನೇರವಾಗಿ ಸಾರಿ ತಯಾರಿಕೆ ಮಿಲ್‌ನಿಂದ ರಿಟೇಲ್ ಆಗಿ ವಿವಿಧ ನಮೂನೆಯ ಸೀರೆಗಳಾದ ಗ್ರೀನ್ ವಿತ್ ಮೆರೂನ್ ಝುರಿ ವರ್ಕ್ ಸಾರೀಸ್, ವೈಯಲೆಟ್ ಸ್ಯಾಂಡಲ್ ಸಾರೀಸ್, ಟ್ರೆಡಿಷನಲ್ ಬುಟ್ಟಿ, ಸ್ವರ್ಣಲತಾ ಸಿಲ್ಕ್ ಸ್ಯಾರೀಸ್, ಚಾಂದೇರಿ ಸಿಲ್ಕ್ ಸ್ಯಾರಿ, ಕಾಟನ್ ಸಾರೀಸ್, ಜಾರ್ಜೆಟ್ ಶಿಫಾನ್ ಪ್ರಿಂಟೆಡ್ ಕ್ರೇಪ್ ಸಿಲ್ಕ್ ಸಾರೀಸ್, ಪೈತಾನೀ ಸಾರೀಸ್ ಕೇವಲ 150 ರಿಂದ 200 ರೂ.ಗಳ ವರೆಗೆ ಮಾರಾಟ ಮಾಡಲಾಗುತ್ತಿದೆ. ವಿವಿಧ ರೀತಿಯ ದೇಶೀಯ ಇಂಪೋರ್ಟೆಡ್ ಬ್ರಾ, ಪ್ಯಾಂಟಿಗಳು ಕೇವಲ 50 ರೂ.ಗಳಿಗೆ ದೊರೆಯುತ್ತವೆ.

## ನಗರದಲ್ಲಿ ಇಂದು ವಿದ್ಯುತ್ ಇಲ್ಲ

ದೇವರಾಜ ಅರಸು ಬಡಾವಣೆ ಬಿ ಬ್ಲಾಕ್ ಮತ್ತು ಸಿ ಬ್ಲಾಕ್, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2 ನೇ ಹಂತ, ಎಸ್‌ಎಂಕೆ ನಗರ ವಾಲ್ಮೀಕಿ ಸರ್ಕಲ್ ಸುತ್ತಮುತ್ತ ಶಿವಾಲಿ ಚಿತ್ರಮಂದಿರದ ಅಕ್ಕಪಕ್ಕ ಹಾಗೂ ಟೀಚರ್ಸ್ ಕಾಲೋನಿ ಇತರೆ ಪ್ರದೇಶಗಳು, ಕೊಂಡಜ್ಜಿ ರಸ್ತೆ, ಎಸ್‌ಜೆಎಂ ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಂಕೆ ನಗರ 2ನೇ ಹಂತ, ವೀರಾಂಜನೇಯ ಪೆಟ್ರೋಲ್ ಬಂಕ್ ಹತ್ತಿರ, ಬಿಜೆಎಂ ಸ್ಕೂಲ್, ಆರ್‌ಟಿಓ ಆಫೀಸ್, ಬೂದಿಹಾಳ್ ರಸ್ತೆ, ಬಾಬು ಜಗಜೀವ್‌ರಾಂ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 4.30 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

# ಕ್ರೀಡೆ ಸದೃಢ ಆರೋಗ್ಯಕ್ಕೆ ಸಾಕಾರ

## ಹರಿಹರದಲ್ಲಿ ಕ್ರಿಕೆಟ್ ಪಂದ್ಯವನ್ನು ಉದ್ಘಾಟಿಸಿದ ವಾಲ್ಮೀಕಿ ಶ್ರೀ ಪ್ರಸನ್ನಾನಂದ ಸ್ವಾಮೀಜಿ



ಹರಿಹರ,ಫೆ 5- ಮಾನಸಿಕ, ದೈಹಿಕ ಆರೋಗ್ಯ ಸಧೃಡವಾಗಿರಲು ಕ್ರೀಡೆ ಅತ್ಯುತ್ತಮ ಸಹಕಾರಿ ಯಾಗುತ್ತದೆ ಈ ನಿಟ್ಟಿನಲ್ಲಿ ಕ್ರೀಡಾಪಟುಗಳು ತಮ್ಮನ್ನು ಕ್ರೀಡೆಯಲ್ಲಿ ತೊಡಗಿಸಿಕೊಂಡು ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟದ ಕ್ರೀಡಾಪಟುಗಳಾಗಿ ಬೆಳೆಯಿರಿ ಎಂದು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಹೇಳಿದರು.

ನಗರದ ಡಿ.ಆರ್.ಎಮ್. ಕಾಲೇಜ್ ಮೈದಾನ ದಲ್ಲಿ ಮಹರ್ಷಿ ವಾಲ್ಮೀಕಿ ಜಾತ್ರೆಯ ಪ್ರಯುಕ್ತ ಕಾಮಧೇನು ಫ್ರೆಂಡ್ಸ್ ಗ್ರೂಪ್ ಮತ್ತು ಗೋಲ್ಡನ್ ಈಗಲ್ ಕ್ರಿಕೆಟ್ ಇವರ ಸಂಯುಕ್ತ ಆಶ್ರಯದಲ್ಲಿ ಪ್ರಥಮ ಬಾರಿಗೆ ರಾಜ್ಯ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಕ್ರೀಡೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಪಟುಗಳು ಕ್ರೀಡೆಯಲ್ಲಿ ಭಾಗವಹಿಸಿದ ಮೇಲೆ ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ನಮ್ಮ ಬದುಕಿಗೆ ಪೂರಕವಾಗಿವಂತದು, ಕ್ರೀಡೆಯನ್ನು ಪ್ರೋತ್ಸಾಹಿಸಬೇಕೆಂದರು.

ಸಂತೋಷವಾದಗ ಬಹಳ ಸಂತೋಷವಾಗದೆ ದುಃಖ ಬಂದಾಗ ತುಂಬಾ ದುಃಖಿಸದೆ ನಮ್ಮ ಜೀವನದ ಬದುಕಲ್ಲಿ ಎರಡನ್ನೂ ಸಮಾನವಾಗಿ ತೆಗೆದುಕೊಂಡು ಹೋಗಬೇಕು.

ಮಾನಸಿಕ ದೈಹಿಕ ಆರೋಗ್ಯ ಸದೃಡವಾಗಿರಲಿಕ್ಕೆ ಕ್ರೀಡೆ ಅತ್ಯುತ್ತಮ ಸಹಕಾರಿಯಾಗುತ್ತದೆ. ಈ ನಿಟ್ಟಿನಲ್ಲಿ ಕ್ರೀಡಾಪಟುಗಳು ತಮ್ಮ ಕ್ರೀಡೆಯಲ್ಲಿ ತೊಡಗಿಸಿಕೊಂಡು ಜಿಲ್ಲಾ, ರಾಜ್ಯ, ರಾಷ್ಟ್ರ ಮಟ್ಟಕ್ಕೆ ಕ್ರೀಡಾಪಟುಗಳಾಗಿ ಬೆಳೆಯಬೇಕು ಎಂದು ಕರೆ ನೀಡಿದರು.

ಇಂದಿನಿಂದ ಮೂರು ದಿನಗಳ ಕಾಲ ಕ್ರೀಡೆ ನಡೆಯಲಿದೆ. ಪ್ರಥಮ ಬಹುಮಾನ ಮಹರ್ಷಿ ವಾಲ್ಮೀಕಿ ಕಪ್ 60.000/ರೂ ನಗದು, ದ್ವಿತೀಯ ಬಹುಮಾನ 30.000/ ರೂ ನಗದು ವಾಲ್ಮೀಕಿ ಕಪ್ ವಿಜೇತ ಕ್ರೀಡಾಪಟುಗಳಿಗೆ ನೀಡಲಾಗುವುದು

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಆಯುಕ್ತರು ಉದಯ್ ಕುಮಾರ್ ಬಿ.ಟಿ, ನಗರ ಸಭಾ ಸದಸ್ಯರಾದ ಎಮ್.ಎಸ್ ವಸಂತಕುಮಾರ್, ನೀತಾ ಮೆಹರ್‍ವಾಡಿ, ಕೆ.ಜಿ ಸಿದ್ದೇಶ್, ಜಿಲ್ಲಾ ಎಸ್ಸಿ ಮೋರ್ಚಾ ಉಪಾಧ್ಯಕ್ಷ ರಾಘವೇಂದ್ರ ಕೊಂಡಜ್ಜಿ, ನಂದಿಗಾವಿ ಶ್ರೀ ನಿವಾಸ, ಮಾರುತಿ ಬೇಡರ್, ಮಂಜುನಾಥ್ ಕಳ್ಳೇರ್, ರಾಜು ಐರಣಿ, ಸಂತೋಷ, ರಮೇಶ್, ಎಂ ಪ್ರೇಮ್ ಕುಮಾರ್, ಪರಮೇಶ್ ಸಿರಗೇರಿ, ದಾದಪೀರ್, ಪ್ರೀತಂಬಾಬು, ಸಾಗರ್ ತಳವಾರ್, ಗಣೇಶ್, ಸಿದ್ದಾರ್ಥ್, ಮಧುಸೂದನ, ಪಾರ್ವತಮ್ಮ, ದೇವರಾಜ್, ಕೋಟ್ರೇಶ್, ಧನರಾಜ್, ಬಸವರಾಜ್ ಭೀಮನಗರ, ರಾಜು ಆಟೋ ಮತ್ತಿತರರು ಭಾಗವಹಿಸಿದ್ದರು.

## ದಾಖಲೆಗಳಿಲ್ಲದ 1.47 ಕೋಟಿ ವಶ



**(1ನೇ ಪುಟದಿಂದ)** ಇಲಾಖೆಗೆ ನೀಡಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಸಂದರ್ಭದಲ್ಲಿ ಡಿವೈಎಸ್ಪಿ ನಾಗೇಶ್ ಐತಾಳ್, ಪೊಲೀಸ್ ನಿರೀಕ್ಷಕರುಗಳಾದ ತಿಮ್ಮಣ್ಣ, ಗಜೇಂದ್ರಪ್ಪ, ಆಜಾದ್ ನಗರ ಠಾಣೆಯ ಪಿಎಸ್‌ಐ ಶೈಲಜಾ ಹಾಗೂ ಸಿಬ್ಬಂದಿಗಳು ಇದ್ದರು.


**ಸಾಯಿ ಇನ್ ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ಸ್**

(ಕರ್ನಾಟಕ ಸರ್ಕಾರ ಮತ್ತು ಪ್ಯಾರಮೆಡಿಕಲ್ ಬೋರ್ಡ್‌ನಿಂದ ಮಾನ್ಯತೆ ಪಡಿದಿದೆ)

ಸರ್ಕಾರಿ ಆಸ್ಪತ್ರೆ ರಸ್ತೆ, ಹೂವಿನಹಡಗಲಿ-583219 ಬಳ್ಳಾರಿ ಜಿ॥

**2020-21 ನೇ ಸಾಲಿನ ಪ್ಯಾರಾಮೆಡಿಕಲ್ ಪ್ರವೇಶಕ್ಕೆ 15.02.2021 ಕೊನೆಯ ದಿನಾಂಕ**

| ಕ್ರ.ಸಂ | ಕೋರ್ಸ್‌ಗಳು | ವಿದ್ಯಾರ್ಹತೆ | ಅವಧಿ |
| --- | --- | --- | --- |
| 01 | ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನೀಷಿಯನ್ (DMLT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 02 | ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ (DMIT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |
| 03 | ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ & ಅನಸ್ತೇಶೀಯಾ ಟೆಕ್ನಾಲಜಿ (DOT & AT) | S.S.L.C | 3 ವರ್ಷ |
| | | P.U.C ವಿಜ್ಞಾನ | 2 ವರ್ಷ |

ಉದ್ಯೋಗಾವಕಾಶಗಳು :- ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆರೋಗ್ಯ ಕೇಂದ್ರಗಳು, ಜಿಲ್ಲಾ ಆಸ್ಪತ್ರೆ, ನಗರಸಭೆ ಹಾಗೂ ಮಹಾನಗರ ಪಾಲಿಕೆಗಳಲ್ಲಿ, ಖಾಸಗಿ ಆಸ್ಪತ್ರೆಗಳಲ್ಲಿ, ಮೆಡಿಕಲ್ ಕಾಲೇಜ್‌ಗಳಲ್ಲಿ, ಸರ್ಕಾರದ ಸಂಸ್ಥೆ (ಎನ್.ಜಿ.ಓ) ಗಳಲ್ಲಿ, ದೇಶ-ವಿದೇಶಗಳಲ್ಲಿ

ಮಾಹಿತಿಗಾಗಿ :- ಡಾ॥ ನಾಗನಗೌಡ.ಡಿ MBBS, D Ortho DNB

Mob : 91138 03006, 95512 30777, 95512 31777

# 50 ವರ್ಷ ಮೀರಿದವರಿಗೆ ಮಾರ್ಚ್‌ನಿಂದ ಕೊರೊನಾ ಲಸಿಕೆ



ನವದೆಹಲಿ, ಫೆ. 5 - 50 ವರ್ಷಕ್ಕೂ ಹೆಚ್ಚಿನ ವಯಸ್ಸಿನವರು ಹಾಗೂ ರೋಗಗಳನ್ನು ಹೊಂದಿರುವ 27 ಕೋಟಿ ಜನರಿಗೆ ಮಾರ್ಚ್ ನಂತರದಲ್ಲಿ ಕೊರೊನಾ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಲೋಕಸಭೆಗೆ ತಿಳಿಸಿದ್ದಾರೆ.


ಪ್ರಶ್ನೋತ್ತರ ಅವಧಿಯಲ್ಲಿ ಲಸಿಕೆ ಕುರಿತ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ ಅವರು, ದೇಶ ದಲ್ಲಿ ಇದುವರೆಗೆ 50 ಲಕ್ಷಕ್ಕೂ ಹೆಚ್ಚು ಜನರಿಗೆ ಲಸಿಕೆ ನೀಡಲಾಗಿದೆ ಎಂದಿದ್ದಾರೆ.

ಮಾರ್ಚ್ ತಿಂಗಳಲ್ಲಿ 50 ವರ್ಷಕ್ಕೂ ಹೆಚ್ಚಿ ನವರು ಹಾಗೂ ರೋಗಗಳನ್ನು ಹೊಂದಿರುವವರಿಗೆ ಲಸಿಕೆ ನೀಡಲಾಗುವುದು. ಈ ಬಗ್ಗೆ ನಿರ್ದಿಷ್ಟ ದಿನಾಂಕ ಹೇಳಲು ಸಾಧ್ಯವಾಗದು ಎಂದು ವರ್ಧನ್ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಂಗೀತ ಪರಿಷತ್‌ನ ಜಿಲ್ಲಾ ಘಟಕದ ಉದ್ಘಾಟನೆ

ಅಖಿಲ ಕರ್ನಾಟಕ ಗಾನಯೋಗಿ ಸಂಗೀತ ಪರಿಷತ್‌ನ ದಾವಣಗೆರೆ ಜಿಲ್ಲಾ ಘಟಕದ ಉದ್ಘಾಟನೆ ಹಾಗೂ ಪದಗ್ರಹಣ ಸಮಾರಂಭ ಇಂದು ಸಂಜೆ 5.00 ಗಂಟೆಗೆ ನಗರದ ತರಳಬಾಳು ಬಡಾವಣೆಯ ಮಾಗನೂರು ಬಸಪ್ಪ ಸಭಾಂಗಣದಲ್ಲಿ ನಡೆಯಲಿದೆ. ಸಾಣೇಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮತ್ತು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯುವುದು. ಅಧ್ಯಕ್ಷತೆಯನ್ನು ಶರಣೆ ಪಂಕಜಾಕ್ಷಿ ಎಂ. ಬಕ್ಕೇಶ್ ವಹಿಸುವರು. ಚನ್ನವೀರಶಾಸ್ತ್ರಿ ಹಿರೇಮಠ, ಅಣಬೇರು ರಾಜಣ್ಣ, ಶಿವಮೂರ್ತಿಸ್ವಾಮಿ ಎ.ಎಚ್, ಮೋತಿ ಪರಮೇಶ್ವರರಾವ್, ಎಂ.ಬಿ. ನಾಗರಾಜ ಕಾಕನೂರು, ವಾಮದೇವಪ್ಪ ಬಿ, ಸಣ್ಣಪ್ಪ ಸಿ ಹೆದ್ನೆ ಇವರುಗಳ ಗೌರವ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ.

# ಯಾರು ಎಲ್ಲಾದರೂ ವಾಸಿಸುವ ಹಕ್ಕು ಪ್ರಜಾಪ್ರಭುತ್ವದಲ್ಲಿದೆ



**ಪ್ರತಿಭಟಿಸಿ ಜನರಿಗೆ ತೊಂದರೆ ನೀಡಿದರೆ ಕಾನೂನು ಕ್ರಮ.**
**- ಅಜಯ್ ಕುಮಾರ್, ಪಾಲಿಕೆ ಮೇಯರ್**

ದಾವಣಗೆರೆ, ಫೆ.5 - ಕಾನೂನಿನ ಚೌಕಟ್ಟಿನಲ್ಲಿ ಯಾರು ಎಲ್ಲಿ ಬೇಕಾದರೂ ವಾಸವಾಗಿರಲು ಪ್ರಜಾಪ್ರಭುತ್ವದಲ್ಲಿ ಹಕ್ಕಿದೆ. ಅದರಂತೆ ಶಾಸಕ ಆರ್.ಶಂಕರ್ ಹಾಗೂ ವಿಧಾನ ಪರಿಷತ್ ಸದಸ್ಯ ಚಿದಾನಂದ ಗೌಡ ದಾವಣಗೆರೆಯಲ್ಲಿ ವಾಸಿಸಲು ಬಯಸಿ, ಮನೆ ಮಾಡಿ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದು ಮಹಾನಗರ ಪಾಲಿಕೆ ಮೇಯರ್ ಬಿ.ಜಿ. ಅಜಯ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಪಾಲಿಕೆಯ ತಮ್ಮ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಪ್ರತಿಯೊಂದನ್ನೂ ವಿರೋಧಿಸುವು ದೇ ಕಾಂಗ್ರೆಸ್ ಸಂಸ್ಕೃತಿಯಾಗಿದೆ. ಮಾಧ್ಯಮಗಳಲ್ಲಿ ಗುರುತಿಸಿಕೊಳ್ಳಬೇಕೆಂಬ ಚಾಳಿ ಅವರದ್ದು. ಅಧಿಕಾರ ಸಿಗಲಿಲ್ಲವೆಂದು ಹತಾಷರಾಗಿ, ಅನಗತ್ಯವಾಗಿ ಪಾಲಿಕೆ ಒಳಗೆ ಪ್ರತಿಭಟಿಸಿ ಸಾರ್ವಜನಿಕರಿಗೆ, ಅಧಿಕಾರಿಗಳಿಗೆ ತೊಂದರೆ ಮಾಡುವುದು ಉಚಿತವಲ್ಲ.

ಸಂಬಂಧವಿಲ್ಲದ ವರೂ ಬಂದು ಈ ರೀತಿ ಪ್ರತಿಭಟನೆ ನಡೆಸಿ ತೊಂದರೆ ನೀಡಿದರೆ, ಕ್ರಮ ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಈಗಾಗಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ ಎಂದು ಹೇಳಿದರು. ಎಂ.ಎಲ್.ಸಿ. ಚಿದಾನಂದಗೌಡ ಅವರು, ಈ ಹಿಂದೆ ಮತ ಕೇಳಲು ಆಗಮಿಸಿದ್ದಾಗ, ತಾವು ಗೆದ್ದರೆ ದಾವಣಗೆರೆಯಲ್ಲಿ ಮನೆ ಮಾಡಿ, ಕರ್ತವ್ಯ ನಿರ್ವಹಿಸಿ, ಮತದಾರರ ಋಣ ತೀರಿಸುವುದಾಗಿ ಹೇಳಿದ್ದರು. ಅದರಂತೆ ಮನೆ ಮಾಡಿದ್ದಾರೆ. ಸಚಿವ ಶಂಕರ್ ಅವರ ಪುತ್ರ ಎಂಜಿನಿಯರಿಂಗ್ ಓದುತ್ತಿದ್ದರು. ಆ ಕಾರಣಕ್ಕಾಗಿ ಅವರು ಮನೆ ಮಾಡಿದ್ದಾರೆ ಎಂದು ವಿವರಿಸಿದರು.

ಯಾವುದೇ ಮತದಾರ ಒಂದು ಕಡೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸುವಾಗ, ಮತ್ತೊಂದು ಕಡೆ ಇದ್ದ ಹೆಸರು ಡಿಲೀಟ್ ಆಗುತ್ತದೆ. ಅಂತೆಯೇ ಈಗಾಗಲೇ ಆರ್. ಶಂಕರ್ ಅವರ ಹೆಸರು ರಾಣೇಬೆನ್ನೂರಿನಲ್ಲಿ ಡಿಲೀಟ್ ಆಗಿರುತ್ತದೆ. ಎರಡು ಕಡೆ ಹೆಸರಿದೆ ಎಂದು ಹೇಳುವ ಕಾಂಗ್ರೆಸ್ ಮುಖಂಡರು ಅರ್ಧ ಮಾಹಿತಿಯೊಂದಿಗೆ ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಸನ್ನ ಕುಮಾರ್ ಅವರು, ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಚುನಾವಣೆಯಲ್ಲಿ ಎಂ.ಎಲ್.ಸಿ.ಗಳ ಹೆಸರು ಸೇರಿಸುವ ಮೂಲಕ ಕಾನೂನಿನಲ್ಲಿ ಇಂತಹ ಅವಕಾಶ ಇದೆ ಎಂದು ತೋರಿಸಿಕೊಟ್ಟಿದ್ದೇ ಕಾಂಗ್ರೆಸ್ ಪಕ್ಷದವರು. ಈಗ ಅವರೇ ವಿರೋಧಿಸುತ್ತಿರುವುದು ಸೂಕ್ತವಲ್ಲ ಎಂದರು.

ಕಾಂಗ್ರೆಸ್ ಪಕ್ಷದವರ ಬಳಿ ಯಾವುದೇ ಅಧಿಕೃತ ಪ್ರಮಾಣೀಕೃತ ದಾಖಲೆಗಳಿಲ್ಲ. ಹಳೆಯ ದಾಖಲೆ ಇಟ್ಟುಕೊಂಡು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಉಪ ಮೇಯರ್ ಸೌಮ್ಯ ನರೇಂದ್ರ ಪವಾರ್, ನಗರ ಯೋಜನೆ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಟಿ. ವೀರೇಶ್, ಸೋಗಿ ಶಾಂತಕುಮಾರ್, ರೇಣುಕಾ ಶ್ರೀನಿವಾಸ್, ಯಶೋಧ, ಶಿಲ್ಪ ಜಯಪ್ರಕಾಶ್, ಗೌರಮ್ಮ ಗಿರೀಶ್, ಎಲ್.ಡಿ. ಗೋಣೆಪ್ಪ, ವೀರೇಶ್ ಪೈಲ್ವಾನ್ ಹಾಗೂ ಇತರರು ಉಪಸ್ಥಿತರಿದ್ದರು.



## ಬೇರೆಯವರ ಆಸೆಗೆ ಮುಳ್ಳಾಗಲಾರೆ : ಅಜಯ್

ಇನ್ನಷ್ಟು ದಿನ ಮೇಯರ್ ಆಗಿ ಸೇವೆ ಸಲ್ಲಿಸಬೇಕೆಂಬ ಆಸೆ ಇತ್ತು. ಮತ್ತೊಂದು ವರ್ಷ ಅವಕಾಶ ನೀಡುವಂತೆ ಪಕ್ಷದ ಮುಖಂಡರಲ್ಲಿ ಕೇಳಿಕೊಂಡಿದ್ದೆ. ಆದರೆ ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವುದರಿಂದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ಬೇರೆಯವರಿಗೂ ಅವಕಾಶ ನೀಡಬೇಕು. ಅವರ ಆಸೆಗೆ ಮುಳ್ಳಾಗಬಾರದು ಎಂಬ ಉದ್ದೇಶದಿಂದ ರಾಜೀನಾಮೆ ನೀಡುತ್ತೇನೆ ಎಂದು ಅಜಯ್ ಕುಮಾರ್ ಹೇಳಿದರು.

## ಹೆಸರು ಸೇರಿಸುವುದು, ಬಿಡುವುದು ಚುನಾವಣಾಧಿಕಾರಿಗಳ ಕೆಲಸ

ಮತದಾರರ ಪಟ್ಟಿಗೆ ಹೆಸರು ಸೇರಿಸುವುದು, ಬಿಡುವುದು ಚುನಾವಣಾ ಅಧಿಕಾರಿಗಳಿಗೆ ಸಂಬಂಧಿಸಿದ ವಿಚಾರ. ಇದರಲ್ಲಿ ನಮ್ಮಗಳ ಹಸ್ತಕ್ಷೇಪ ಏನೂ ಇಲ್ಲ. ಅಧಿಕಾರಿಗಳು ದಾಖಲಾತಿಗಳನ್ನು ಪರಿಶೀಲಿಸಿದ ನಂತರವೇ ಪಟ್ಟಿಯಲ್ಲಿ ಹೆಸರು ಸೇರಿಸುತ್ತಾರೆ. ಕಾಂಗ್ರೆಸ್ ಆರೋಪ ನೋಡಿದರೆ ಚುನಾವಣಾ ಆಯೋಗದ ಮೇಲೆಯೇ ಅವರಿಗೆ ನಂಬಿಕೆ ಇಲ್ಲ ಎನಿಸುತ್ತದೆ.

# ಜಗಳೂರು; ಚಿರತೆ ಓಡಾಟ, ಸಾರ್ವಜನಿಕರ ಆತಂಕ



ಜಗಳೂರು, ಫೆ.5- ತಾಲ್ಲೂಕಿನಲ್ಲಿ ಕೆಲ ತಿಂಗಳಿನಿಂದ ಚಿಕ್ಕಮಲ್ಲನಹೊಳೆ, ಗೊಲ್ಲರಹಟ್ಟಿ, ಮರೇನಹಳ್ಳಿ, ಅಣಬೂರು, ದಾವಣಗೆರೆ ರಸ್ತೆ, ಕೋರ್ಟ್ ಹಿಂಭಾಗ ಸೇರಿದಂತೆ ತಾಲ್ಲೂಕಿನ ಹಲವೆಡೆ ಚಿರತೆಯೊಂದು ಓಡಾಡುತ್ತಿದ್ದು ಸಾರ್ವಜನಿಕರು ಭಯಭೀತರಾಗಿದ್ದಾರೆ.

ಬೆಳಗಿನ ವಾಯುವಿಹಾರಿಗಳು ನೆಮ್ಮದಿಯಾಗಿ ಓಡಾಡಲು ಸಾಧ್ಯವಾಗುತ್ತಿಲ್ಲ.

ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆ ಸೆರೆಹಿಡಿಯಲು ಚಿಕ್ಕಮಲ್ಲನಹೊಳೆ ಗೊಲ್ಲರಹಟ್ಟಿಯಲ್ಲಿ ಬೋನ್ ಅಳವಡಿಸಿದ್ದು ಚಿರತೆ ಹಿಡಿಯಲು ಹರಸಾಹಸ ಪಡುತ್ತಿದ್ದಾರೆ.

ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಪ್ರಕಾಶ್ ಮಾತನಾಡಿ, ಸಾಮಾಜಿಕ ವಲಯ ಅರಣ್ಯ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ಜೊತೆಗೆ ಕಾರ್ಯಾಚರಣೆ ಆರಂಭವಾಗಿದೆ. ಮೂರು ದಿನಗಳಿಂದ ಬೋನನ್ನನು ಚಿರತೆ ಓಡಾಡುವ ಸ್ಥಳದಲ್ಲಿ ಇಡಲಾಗಿದೆ.

ಎಲ್ಲೆಂದರಲ್ಲಿ ನವಿಲುಗಳನ್ನು ತಿಂದು ಹಾಕಿದ್ದು ಆ ಚಿರತೆ ಹೆಜ್ಜೆ ಗುರುತು ಕಂಡು ಹಿಡಿಯಲಾಗುತ್ತಿದೆ.

ಇಂದು ಬೆಳಿಗ್ಗೆ ಒಬ್ಬ ವ್ಯಕ್ತಿಗೆ ಚಿರತೆ ಕಾಣಿಸಿಕೊಂಡಿದ್ದು ಸುತ್ತಮುತ್ತಲಿನ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಯಾರೂ ಭಯಪಡುವ ಅಗತ್ಯವಿಲ್ಲ. ಶೀಘ್ರದಲ್ಲೇ ಸೆರೆಹಿಡಿಯಲಾಗುವುದು ಎಂದರು.

ತಾಲ್ಲೂಕಿನ ಗ್ರಾಮೀಣ ರಸ್ತೆಗಳಲ್ಲಿ ರಾತ್ರಿ ಮತ್ತು ಬೆಳಗಿನ ಜಾವ ದ್ವಿಚಕ್ರ ವಾಹನದಲ್ಲಿ ಮತ್ತು ವಾಯುವಿಹಾರಿಗಳು, ಅರಣ್ಯ ಇಲಾಖೆ ಅಧಿಕಾರಿಗಳು ಶೀಘ್ರವೇ ಚಿರತೆಯನ್ನು ಸೆರೆ ಹಿಡಿಯಬೇಕು ಎಂದು ಒತ್ತಾಯಿಸಿದ್ದಾರೆ.

ಅರಣ್ಯ ಇಲಾಖೆ ಸಾಮಾಜಿಕ ವಲಯ ಅಧಿಕಾರಿ ಶ್ವೇತಾ. ಅರಣ್ಯ ಇಲಾಖೆಯ ಗಾರ್ಡ್ ಕಿರಣ್. ನಿಸಾರ್ ಅಹಮ್ಮದ್. ಚೇತನ್. ಅಂಜಿನಪ್ಪ.ನಾಗರಾಜ್ ಮುರುಡಿಸ್ವಾಮಿ. ನಾಗರಾಜ್, ರಾಜಣ್ಣ, ಪ್ರದೀಪ್ ಸೇರಿದಂತೆ ಇತರರು ಸ್ಥಳದಲ್ಲಿದ್ದಾರೆ.

# ಸರ್ಕಾರಿ ಹೂಡಿಕೆಗಳಲ್ಲಿ ನೇರ ಭಾಗಿಗೆ ಅವಕಾಶ

## ರಿಸರ್ವ್ ಬ್ಯಾಂಕ್ ಮಹತ್ವದ ಕ್ರಮದಿಂದ ಸರ್ಕಾರಕ್ಕೆ ಅಪಾರ ಸಾಲದ ಅವಕಾಶ

ಮುಂಬೈ, ಫೆ. 5 - ಸಣ್ಣ ಹೂಡಿಕೆದಾರರು ನೇರವಾಗಿ ಸರ್ಕಾರದ ಹೂಡಿಕೆಗಳಲ್ಲಿ ಭಾಗಿಯಾಗಲು ಅವರು ನೇರವಾಗಿ ಸರ್ಕಾರದ ಸಾಲ ಪತ್ರಗಳನ್ನು ಖರೀದಿಸಲು ಅವಕಾಶ ಮಾಡಿಕೊಡುವುದಾಗಿ ರಿಸರ್ವ್ ಬ್ಯಾಂಕ್ ತಿಳಿಸಿದೆ. ಈ ಕ್ರಮ ತೆಗೆದುಕೊಂಡ ಮೊದಲ ಏಷಿಯಾದ ದೇಶ ಭಾರತವಾಗಿದೆ. ವಿಶ್ವದ ಕೆಲವೇ ದೇಶಗಳು ಇಂತಹ ಪದ್ಧತಿ ಹೊಂದಿವೆ.

ಮುಂದಿನ ಹಣಕಾಸು ವರ್ಷದಲ್ಲಿ ಸರ್ಕಾರ 12 ಲಕ್ಷ ಕೋಟಿ ರೂ.ಗಳನ್ನು ಸಾಲವಾಗಿ ಪಡೆಯಲು ಉದ್ದೇಶಿಸಿದೆ. ಇದರ ಹೊಣೆಯನ್ನು ರಿಸರ್ವ್ ಬ್ಯಾಂಕ್‌ಗೆ ವಹಿಸಲಾಗಿದೆ. ದೇಶೀಯ ಸಾಲ ಮಾರುಕಟ್ಟೆಯ ಸಾಮರ್ಥ್ಯ ಹೆಚ್ಚಿಲ್ಲದಿರುವುದು ಇದುವರೆಗಿನ ದೊಡ್ಡ ಸಮಸ್ಯೆಯಾಗಿದ್ದು, ಅದನ್ನು ಎದುರಿಸಲು ರಿಸರ್ವ್ ಬ್ಯಾಂಕ್ ನೇರ ಸಾಲ ಹೂಡಿಕೆಗೆ ಅವಕಾಶ ನೀಡಿದೆ.

ಇದರೊಂದಿಗೆ ಸರ್ಕಾರ ಅಪಾರ ಪ್ರಮಾಣದ ಸಾಲ ಪಡೆಯಲು ಅವಕಾಶ ಮಾಡಿಕೊಟ್ಟಂತಾಗಲಿದೆ. ಆದರೆ, ಈ ಸಾಲ ನೇರವಾಗಿ ರಿಸರ್ವ್ ಬ್ಯಾಂಕ್ ನಿಗಾದಲ್ಲಿರಲಿದೆ.

ಪ್ರಸಕ್ತ ಸಣ್ಣ ಹೂಡಿಕೆದಾರರು ಸರ್ಕಾರದ ಬಾಂಡ್‌ಗಳನ್ನು ಬಿ.ಎಸ್.ಇ. ಹಾಗೂ ಎನ್.ಎಸ್.ಇ.ಗಳ ಗೊಬಿಡ್ ವೇದಿಕೆಯ ಮೂಲಕ ಹೂಡಿಕೆ ಪಡೆಯಲು ಅವಕಾಶವಿದೆ. ಆದರೆ, ಈ ಕ್ರಮ ಹೆಚ್ಚು ಆಕರ್ಷಣೆ ಪಡೆದುಕೊಂಡಿಲ್ಲ.

ಯಾವುದೇ ದೇಶ ನೇರವಾಗಿ ಸಾಲ ಬಾಂಡ್‌ಗಳನ್ನು ಪಡೆಯಲು ಅವಕಾಶ ನೀಡಿಲ್ಲ. ಆದರೆ, ಬ್ರಿಟನ್, ಬ್ರೆಜಿಲ್ ಹಾಗೂ ಹಂಗೇರಿಗಳು ಸಣ್ಣ ಹೂಡಿಕೆದಾರರು ಮೂರನೇ ವ್ಯಕ್ತಿಯ ನಿಯಂತ್ರಣದ ಮೂಲಕ ಮಾರಲು ಇಲ್ಲವೇ ಖರೀದಿಸಲು ಅವಕಾಶ ಮಾಡಿಕೊಟ್ಟಿವೆ.

ಚಿಲ್ಲರೆ ಹೂಡಿಕೆದಾರರು ಸಾಲ ಮಾರುಕಟ್ಟೆಗೆ ಪ್ರವೇಶಿಸಲು ರಿಸರ್ವ್ ಬ್ಯಾಂಕ್ ತೆಗೆದುಕೊಂಡಿರುವ ಎರಡನೇ ಪ್ರಮುಖ ಕ್ರಮ ಇದಾಗಿದೆ. ಕೆಲ ವರ್ಷಗಳ ಹಿಂದೆ ಷೇರು ವಿನಿಮಯ ಮಾರುಕಟ್ಟೆ ಮೂಲಕ ಪ್ರವೇಶಕ್ಕೆ ಅವಕಾಶ ನೀಡಲಾಗಿತ್ತಾದರೂ, ಅದು ಹೆಚ್ಚು ಫಲ ನೀಡಿರಲಿಲ್ಲ.

ನೂತನ ಯೋಜನೆಯ ಅನ್ವಯ ಹೂಡಿಕೆದಾರರು ರಿಸರ್ವ್ ಬ್ಯಾಂಕ್ ಮೂಲಕ ಚಿಲ್ಲರೆ ನೇರ ಹೂಡಿಕೆಯ ಖಾತೆ ತೆರೆಯಬೇಕಿದೆ. ಈ ಬಗ್ಗೆ ವಿವರಗಳನ್ನು ನಂತರದಲ್ಲಿ ಪ್ರಕಟಿಸುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ.

ಸರ್ಕಾರದ ಷೇರುಗಳು, ಮಾರುಕಟ್ಟೆಗಳಿಗೆ ಆನ್‌ಲೈನ್ ಮೂಲಕ ಪ್ರವೇಶ ಪಡೆಯಲೂ ಅವಕಾಶ ನೀಡಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

# ಜಿಲ್ಲಾ ನ್ಯಾಯಾಲಯದಿಂದ ಶ್ರೀರಾಮ ಮಂದಿರ ನಿಧಿ ಸಂಗ್ರಹಣಾ ಅಭಿಯಾನ



ದಾವಣಗೆರೆ, ಫೆ.5- ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಶ್ರೀರಾಮ ಮಂದಿರ ನಿರ್ಮಾಣದ ನಿಧಿ ಸಂಗ್ರಹಣೆಯ ಅಭಿಯಾನ ನಡೆಯಿತು. ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್.ದಿವಾಕರ್, ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಎ.ಸಿ.ರಾಘವೇಂದ್ರ, ಅದಿವ್ಯಕ್ತ ಪರಿಷತ್ತಿನ ಜಿಲ್ಲಾಧ್ಯಕ್ಷ ಎಲ್.ದಯಾನಂದ್, ಆರ್.ಎಸ್.ಎಸ್‌ನ ಬಸವರಾಜ್ ಉಚ್ಚಂಗಿದುರ್ಗ, ರೂಪೇಶ್, ಚಂದ್ರಶೇಖರ್, ಎ.ಎಸ್. ಮಂಜುನಾಥ್, ಬಿ.ವಿ.ಮಂಜುಳಾ, ನೀಲಕಂಠ ಸ್ವಾಮಿ, ಎಸ್.ಮಂಜು, ಕೆ.ಎಸ್.ವಿರೇಶ್ ಇನ್ನೂ ಮುಂತಾದ ವಕೀಲರುಗಳು ಹಾಜರಿದ್ದರು.

# ನಗರಕ್ಕೆ ಇಂದು ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ದುರ್ಯೋಧನ

ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಅಧ್ಯಕ್ಷ ದುರ್ಯೋಧನ ಎಂ. ಐಹೊಳೆ ಅವರು ಇಂದು ನಗರಕ್ಕೆ ಭೇಟಿ ನೀಡಲಿದ್ದಾರೆ. ಅವರು ಮಧ್ಯಾಹ್ನ 12 ಗಂಟೆಗೆ ನಗರಕ್ಕಾಗಮಿಸಿ, ಕರ್ನಾಟಕ ಆದಿಜಾಂಭವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಕಚೇರಿಗೆ ಭೇಟಿ ನೀಡಿ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಲಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ದಿನಾಂಕ 18.01.2021 ರಂದು ಜನತಾವಾಣಿ ದಿನಪತ್ರಿಕೆ ಪುಟ ಸಂಖ್ಯೆ 4 ರಲ್ಲಿ **"ಜಮೀನು ಮಾರಾಟಕ್ಕಿದೆ"** ಎನ್ನುವ ತಲೆಬರಹದಡಿಯಲ್ಲಿ " **ಆವರಗೆರೆ ಸ.ನಂ.58, 59, 54, 10 ಎಕರೆ ಜಮೀನು ಮಾರಾಟಕ್ಕಿದೆ**" 72042, 66144 ಎನ್ನುವ ಜಾಹೀರಾತು ಬಂದಿರುವುದು ಸರಿಯಷ್ಟೇ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ನನ್ನ ಕಕ್ಷಿದಾರರಾದ **ಶ್ರೀಮತಿ ಲೀಲಾವತಿ ವೀರಭದ್ರಪ್ಪ ಪಾವಟೆ** ಎನ್ನುವವರು **ಓ.ಎಸ್. 05/2010** ರಂತೆ ದಾವಣಗೆರೆ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಸದರಿ ಡಿಕ್ರಿಯನ್ನು ಸಹ ಪಡಿದಿರುತ್ತಾರೆ. ಸದರಿ ಡಿಕ್ರಿಯ ಅನ್ವಯ ಆಸ್ತಿಗಳ ವಿಭಜನೆಗಾಗಿ **ಎಫ್.ಡಿ.ಪಿ ನಂ. 17/2015** ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣ ಹಾಲಿ ಚಾಲ್ತಿಯಲ್ಲಿ ಇರುತ್ತದೆ. ಪತ್ರಿಕಾ ಜಾಹಿರಾತಿನಲ್ಲಿ ತೋರಿಸಿರುವ ಜಮೀನುಗಳ ಮೇಲೆ ಉಲ್ಲೇಖಿಸಿದ ಪ್ರಕರಣಗಳಲ್ಲಿ ವಾಸ್ತು ವಿಷಯ ಆಗಿದ್ದು, ಸದರಿ ಜಮೀನುಗಳ ಪರಭಾರೆ ಕಾನೂನು ಬಾಹಿರ ಆಗಿರುತ್ತದೆ.

ಆದ ಕಾರಣ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಮೇಲೆ ಹೇಳಿದ ಜಾಹೀರಾತಿನ ಅನ್ವಯ ಈ ಕೆಳಕಂಡ ವ್ಯಕ್ತಿಗಳಾದ **ಜಿ.ಎಸ್.ಶಿವಯೋಗಪ್ಪ, ಜಿ.ಎಸ್. ಪ್ರೇಮ, ಜೆ.ಎಸ್ ಲೀಲಾವತಿ, ಜೆ.ಎಸ್. ಸಿದ್ದಲಿಂಗೇಶ್ ಹಾಗೂ ಜಿ.ಎಸ್. ಸುಮುಖ** ಅಥವಾ ಬೇರೆ ಯಾರಾದರೂ ಮಧ್ಯವರ್ತಿಗಳೊಂದಿಗಾಗಲೀ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲಿ ವ್ಯವಹರಿಸಬಾರದು. ಈ ಸೂಚನೆಯ ಹೊರತಾಗಿಯೂ ಒಂದು ವೇಳೆ ವ್ಯವಹರಿಸಿದ್ದೇ ಅದಲ್ಲಿ ಅದು ಅಸಿಂಧುವಾಗುತ್ತದೆಯಲ್ಲದೇ ನನ್ನ ಕಕ್ಷಿದಾರರಿಗೆ ಹಾಗೂ ಅವರಿಗೆ ಆಸ್ತಿಯಲ್ಲಿ ಇರತಕ್ಕ ಹಿಸ್ಸಾ ಹಕ್ಕಿಗೆ ಮತ್ತು ಹಿತಾಸಕ್ತಿಗಳಿಗೆ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲ.

ನ್ಯಾಯಾವಾದಿಗಳು
**ಎಸ್.ಜಿ. ಮಹಾವೀರ್, ಸ್ವಾಮಿ.ಕೆ.ಜಿ.ಕೆ.**
ನ್ಯಾಯವಾದಿಗಳು, ನಂ. 417/4ಎ, 4ಬಿ,'ಲಾ ಸಲ್ಯೂಷನ್ಸ್' 1ನೇ ಮಹಡಿ, ಬೆನಕೇಶ್ ಪ್ಲಾಜಾ, ಜನತಾವಾಣಿ ಕಛೇರಿ ಎದುರು, ದೀಕ್ಷಿತ್ ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ.
**(ಸಂ. ದೂ) 98444 13266, 98450 03326**

## ಜನತಾವಾಣಿ

## ನೂತನ ಏಜೆಂಟರಾಗಿ ನೇಮಕ



ಜಾಹೀರಾತು ಹಾಗು ಪತ್ರಿಕೆಗಾಗಿ
**ಎಂ. ಮಂಜುನಾಥ್ (ಮಯೂರ್)**
**ತಂದೆ ಎಂ. ಮಾರಪ್ಪ**
10ನೇ ವಾರ್ಡ್, ಗೌಡ್ರು ಓಣಿ, ಕೂಡ್ಲಿಗಿ.
ಇವರನ್ನು ಸಂಪರ್ಕಿಸಿ.
ಫೋ. : 8722467722









JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte